# ಕನ್ನಡ ಬರಹದ ಸೊಲ್ಲರಿಮೆ–೫

**(ಇದು ಕನ್ನಡದ್ದೇ ವ್ಯಾಕರಣ)**

**ಡಿ. ಎನ್. ಶಂಕರ ಬಟ್**

KANNADA BARAHADA SOLLARIME-5 (A Grammar of Written Kannada, part 5) by D. N. Shankara Bhat, Mungaravalli, P.O. Bhimanakone, Honnesara, Sagara 577 417. Phone: 9449774956.
E-mail <bhatdns@gmail.com>

ಮೊದಲನೆಯ ಅಚ್ಚು: ೨೦೧೫

© : ಬರಹಗಾರ

**ಹೊರತರಿಕೆ**

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಡಿ. ಎನ್. ಶಂಕರ ಬಟ್
ಅಂಚೆ: ಬೀಮನಕೋಣೆ,
ಹೆಗ್ಗೋಡು,
ಸಾಗರ ೫೭೭ ೪೧೭

**ಹಂಚಿಕೆ**
ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ೧೧ ಕ್ರೆಸೆಂಟ್ ರಸ್ತೆ,
ಕೆ.ಪಿ. ಈಸ್ಟ್, ಬೆಂಗಳೂರು ೫೬೦ ೦೦೧

**ಅಚ್ಚು**
ಶ್ರೀಶಕ್ತಿ ಎಲೆಕ್ಟ್ರಿಕ್ ಪ್ರೆಸ್,
೧೩ನೇ ಅಡ್ಡರಸ್ತೆ, ಜಯನಗರ
ಮಯ್ಸೂರು ೫೭೦ ೦೧೪

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

# ಮುನ್ನುಡಿ

ಇವತ್ತು ನಮ್ಮಲ್ಲಿ ಬಳಕೆಯಲ್ಲಿರುವ ಕನ್ನಡ ವ್ಯಾಕರಣಗಳು ನಿಜಕ್ಕೂ ಕನ್ನಡದ ವ್ಯಾಕರಣಗಳೇ ಅಲ್ಲ; ಯಾಕೆಂದರೆ, ಅವು ಕನ್ನಡದ ಪದ, ಪದಕಂತೆ, ಮತ್ತು ಸೊಲ್ಲುಗಳನ್ನು ಉಂಟುಮಾಡುವಲ್ಲಿ ಎಂತಹ ಕಟ್ಟಲೆಗಳು ಬಳಕೆಯಾಗುತ್ತವೆ ಎಂಬುದನ್ನು ತಿಳಿಸುವ ಬದಲು, ಸಂಸ್ಕ್ರುತ ವ್ಯಾಕರಣದ ಕಟ್ಟಲೆಗಳನ್ನು ಕನ್ನಡಕ್ಕೆ ಅಳವಡಿಸಲು ಪ್ರಯತ್ನಿಸುತ್ತವೆ; ಇದನ್ನು ನಾನು ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದೆ.

ನಿಜಕ್ಕೂ ಕನ್ನಡದ್ದೇ ಆದ ವ್ಯಾಕರಣ (ಸೊಲ್ಲರಿಮೆ) ಎಂತಹದು ಎಂಬುದನ್ನು ವಿವರಿಸುವ ಪ್ರಯತ್ನವೊಂದರಲ್ಲಿ ನಾನೀಗ ತೊಡಗಿದ್ದು, ಅದರ ಮೊದಲ ನಾಲ್ಕು ತುಂಡುಗಳನ್ನು ೨೦೧೦, ೨೦೧೧,೧೨, ಮತ್ತು ೨೦೧೩ರಲ್ಲಿ ಹೊರತಂದಿದ್ದೆ; ಇದೀಗ ಅದರ ಅಯ್ದನೆಯ ತುಂಡು ಹೊರಬರುತ್ತಿದೆ.

ಇದರಲ್ಲಿ ನಾನು ಕನ್ನಡ ಬರಹದ ಸೊಲ್ಲರಿಮೆಯನ್ನು ಬರೆಯುತ್ತಿದ್ದೇನೆ; ನುಡಿಯ ಸೊಲ್ಲರಿಮೆಗಿಂತ ಬರಹದ ಸೊಲ್ಲರಿಮೆ ಹಲವು ವಿಶಯಗಳಲ್ಲಿ ಬೇರಾಗಿರುತ್ತದೆ ಎಂಬುದನ್ನು ಇದರ ಮೊದಲನೆಯ ಪಸುಗೆಯಾದ ಮುನ್ನೋಟದಲ್ಲಿ ವಿವರಿಸಿದ್ದೆ. ಇವತ್ತು ಕನ್ನಡ ಬರಹದಲ್ಲಿ ಎಂತಹ ಸೊಲ್ಲರಿಮೆಯ ಕಟ್ಟಲೆಗಳು ಬಳಕೆಯಾಗುತ್ತವೆ ಎಂಬುದನ್ನು ವಿವರಿಸುವುದರೊಂದಿಗೆ, ಎಂತಹವನ್ನು ಬಳಸಿದರೆ ಒಳ್ಳೆಯದು ಎಂಬುದನ್ನೂ ಬರಹದ ಸೊಲ್ಲರಿಮೆ ತಿಳಿಸಬಲ್ಲುದು.

ಈ ಅಯ್ದನೆಯ ತುಂಡಿನಲ್ಲಿ ಪರಿಚೆಪದಗಳು ಮತ್ತು ಬೇರೆ ಪದಗುಂಪುಗಳು ಎಂಬ ಎರಡು ಪಸುಗೆಗಳಿವೆ. ಇವುಗಳಲ್ಲಿ ಮೊದಲನೆಯದಾದ ಹನ್ನೊಂದನೆಯ ಪಸುಗೆ ದೊಡ್ಡ, ಚಿಕ್ಕ, ಉದ್ದ, ಕೆಂಪು ಮೊದಲಾದ ಹೆಸರುಪರಿಚೆಗಳು ಮತ್ತು ಕೆಂಪಗೆ, ಮೆಲ್ಲಗೆ, ಮೇಲೆ, ಮೊದಲು ಮೊದಲಾದ ಎಸಕಪರಿಚೆಗಳು ಎಂತಹವು, ಹೆಸರುಪದಗಳಿಂದ ಮತ್ತು ಎಸಕಪದಗಳಿಂದ ಅವು ಹೇಗೆ ಬೇರಾಗಿವೆ, ಮತ್ತು ಸೊಲ್ಲುಗಳಲ್ಲಿ ಅವುಗಳ ಬಳಕೆ ಹೇಗೆ ನಡೆಯುತ್ತದೆ ಎಂಬುದನ್ನು ವಿವರಿಸುತ್ತದೆ.

ಎರಡನೆಯದಾದ ಹನ್ನೆರಡನೆಯ ಪಸುಗೆಯಲ್ಲಿ ಇದುವರೆಗೆ ವಿವರಿಸಿರುವ ಹೆಸರುಪದ, ಎಸಕಪದ, ಆಡುಪದ, ತೋರುಪದ, ಮತ್ತು ಪರಿಚೆಪದಗಳಿಂದ ಬೇರಾಗಿರುವ ಪದಗುಂಪುಗಳು ಯಾವುವಿವೆ ಎಂಬುದನ್ನು ತಿಳಿಸಲಾಗಿದೆ. ಇವುಗಳಲ್ಲಿ ಎಣಿಕೆಪದಗಳ ಗುಂಪು ಮುಕ್ಯವಾದುದು.

ಇದೊಂದು ಅರಿಮೆಯ ಬರಹವಾದುದರಿಂದ, ಇದರಲ್ಲಿ ಹಲವು ಅರಿಮೆಯ ಪದಗಳನ್ನು ಬಳಸಲೇಬೇಕಾಗುತ್ತದೆ; ಆದರೆ, ಇಂತಹ ಪದಗಳು ಕನ್ನಡದಲ್ಲಿ ಬಳಕೆಯಲ್ಲಿಲ್ಲವಾದುದರಿಂದ, ಮತ್ತು ಇದ್ದರೂ ಅವನ್ನೆಲ್ಲ ನೇರವಾಗಿ ಸಂಸ್ಕ್ರುತದಿಂದ ಎರವಲು ಪಡೆಯಲಾಗಿದೆಯಾದುದರಿಂದ, ಅವು ಕನ್ನಡದ ಸೊಲ್ಲರಿಮೆಗೆ ಮತ್ತು ಕನ್ನಡದ ಬರಹಕ್ಕೆ ಹೊಂದಿಕೆಯಾಗುವುದಿಲ್ಲ. ಹಾಗಾಗಿ, ಅವುಗಳಲ್ಲಿ ಹೆಚ್ಚಿನವನ್ನೂ ಬಿಟ್ಟುಕೊಟ್ಟು, ಹಲವು ಅರಿಮೆಯ ಪದಗಳನ್ನು ಇಲ್ಲಿ ಹೊಸದಾಗಿ ಉಂಟುಮಾಡ ಲಾಗಿದೆ. ಅವುಗಳ ಪಟ್ಟಿಯೊಂದನ್ನು ಈ ಹೊತ್ತಗೆಯ ಸುರುವಿನಲ್ಲೇ ಕೊಡಲಾಗಿದೆ.

ಈ ಹೊತ್ತಗೆಯನ್ನು ಅಂದವಾಗಿ ಅಚ್ಚುಹಾಕಿಸಿರುವ ಶ್ರೀಶಕ್ತಿ ಇಲೆಕ್ಟ್ರಿಕ್ ಪ್ರೆಸ್‌ನ ರಾ. ಶ್ರೀ. ಮೋಹನ ಮೂರ್‍ತಿ ಅವರನ್ನು, ಇದರ ಮಾರಾಟದ ಹೊಣೆ ಹೊತ್ತಿರುವ ನವಕರ್‍ನಾಟಕ ಪ್ರಕಾಶನದ ರಾಜಾರಾಮ್ ಅವರನ್ನು, ಮತ್ತು ಇದನ್ನು ಬರೆಯುವಲ್ಲಿ ಹಲವು ಬಗೆಯ ನೆರವನ್ನು ನೀಡಿರುವ ನನ್ನ ಮಡದಿ ಬಾರತಿ ಬಟ್ ಅವರನ್ನು ನಾನು ಇಲ್ಲಿ ನೆನಪಿಸಬಯಸುತ್ತೇನೆ.

ಮುಂಗರವಳ್ಳಿ, ಸಾಗರ — ಡಿ.ಎನ್.ಶಂಕರ ಬಟ್

ಜೂನ್ ೧, ೨೦೧೫

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

# ಸೊಲ್ಲರಿಮೆ ೧-೪ರ ಅಡಕ ಒಳಪಿಡಿ

## ಸೊಲ್ಲರಿಮೆ-೧


**೧ ಮುನ್ನೋಟ** **೧೩**

**೨ ಪದಗಳ ಇಟ್ಟಳ: ಹೆಸರುಪದಗಳು** **೮೭**

**೨.೧** ಒಟ್ಟಿಸಿದ ಹೆಸರುಪದಗಳು ೧೧೮

೨.೨ ಜೋಡುಪದಗಳು ೧೫೮

**೩ ಪದಗಳ ಇಟ್ಟಳ: ಉಳಿದ ಪದಗಳು** **೧೯೪**

೩.೧ ಎಸಕಪದಗಳ ಇಟ್ಟಳ ೧೯೪

೩.೨ ಕೂಡುಪದಗಳು ೨೦೫

೩.೩ ಪರಿಚೆಪದಗಳ ಇಟ್ಟಳ ೨೩೦

**೪ ಪದರೂಪಗಳ ಇಟ್ಟಳ** **೨೫೭**

**೪.೧** ಎಸಕಪದಗಳ ಪದರೂಪಗಳು ೨೬೨

೪.೨ ಹೆಸರುಪದಗಳ ಪದರೂಪಗಳು ೩೦೭

೪.೩ ಬೇರೆ ಪದಗಳ ಪದರೂಪಗಳು ೩೧೭


## ಸೊಲ್ಲರಿಮೆ-೨


**೫. ಎಸಕಪದಗಳ ಬಳಕೆ** **೩೩೯**

೫.೧ ಮುನ್ನೋಟ ೩೩೯

೫.೨ ಹೊತ್ತಿನ ಪತ್ತುಗೆ ೩೫೬

೫.೩ ಹೊತ್ತಿನ ಇಟ್ಟಳ ೩೭೨

೫.೪ ಹೊತ್ತಿನ ಇಟ್ಟಳ ಮತ್ತು ಎಸಕದ ಇಟ್ಟಳ ೩೯೯

೫.೫ ಆಡುಗನ ನಿಲುವು ೪೧೫

೫.೬ ಎಸಕದ ಅಳವಿ ೪೫೦

**೬ ಹೆಸರುಕಂತೆಗಳ ಇಟ್ಟಳ** **೪೬೩**

೬.೧ ಮುನ್ನೋಟ ೪೬೨

೬.೨ ತಿರುಳುಪದಗಳ ಬಗೆಗಳು ೪೭೪

೬.೩ ಪಾಂಗುಗಳ ಪರಿಚೆಯನ್ನು ತಿಳಿಸುವುದು ೪೯೦

೬.೪ ಪಾಂಗುಗಳ ಅಳವಿಯನ್ನು ತಿಳಿಸುವುದು ೫೩೬


© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

೬.೫ ಪಾಂಗುಗಳನ್ನು ನೆಲೆಗೊಳಿಸುವುದು ೫೭೨
೬.೬ ಪಾಂಗುಗಳನ್ನು ಗುರುತಿಸುವ ಬೇರೆ ಬಗೆಗಳು ೬೦೨

## ಸೊಲ್ಲರಿಮೆ–೩

**೭ ಎಸಕಪದಗಳ ಪಾಂಗುಗಳು**
೭.೧ ಮುನ್ನೋಟ ೬೫೫
೭.೨ ಇರುಹ ಪದದ ಪಾಂಗಿಟ್ಟಳಗಳು ೬೭೨
೭.೩ ಎಸಕಪದಗಳ ಪಾಂಗಿಟ್ಟಳಗಳು ೭೦೧
೭.೪ ಇಟ್ಟಳದ ಪಾಂಗುಗಳ ಬಗೆಗಳು ೭೨೫
೭.೫ ನೆರವು ಪಾಂಗುಗಳು: ಹೊತ್ತು ಮತ್ತು ಇಂಬು ೭೬೪
೭.೬ ಬೇರೆ ನೆರವು ಪಾಂಗುಗಳು ೭೯೯

**೮ ಪಾಂಗಿಟ್ಟಳದಲ್ಲಿ ಮಾರ್ಪಾಡುಗಳು**
೮.೧ ಮುನ್ನೋಟ ೮೧೩
೮.೨ ಎಸಕಪದವನ್ನು ಮಾರ್ಪಡಿಸದೆ ಪಾಂಗಿಟ್ಟಳವನ್ನು ಮಾರ್ಪಡಿಸುವುದು ೮೨೨
೮.೩ ಇಸುವೆಸಕಪದದ ಪಾಂಗಿಟ್ಟಳಗಳು ೮೫೨
೮.೪ ಸೇರಿಕೆಯೆಸಕಪದಗಳ ಪಾಂಗಿಟ್ಟಳಗಳು ೯೦೨
೮.೫ ಎದುರೆಸಕದ ಪಾಂಗಿಟ್ಟಳಗಳು ೯೨೧
೮.೬ ಕೂಡುಪದಗಳ ಪಾಂಗಿಟ್ಟಳಗಳು ೯೫೦
೮.೭ ಮಾಡುಗವನ್ನು ಮರೆಮಾಚುವುದು ೯೮೮

## ಸೊಲ್ಲರಿಮೆ–೪

**೯ ಆಡುಪದಗಳು ೧೦೧೩**
೯.೧ ಮುನ್ನೋಟ ೧೦೧೫
೯.೨ ಆಡುಪದಗಳ ಕೆಲಸ ೧೦೨೭
೯.೩ ತಾನು ಪದದ ಬಳಕೆ ೧೦೫೯
೯.೪ ಆಡುಪದಗಳು ಮತ್ತು ಹೆಸರುಪದಗಳು ೧೦೯೪
೯.೫ ಆಡುಪದಗಳು ಮತ್ತು ತೋರುಪದಗಳು ೧೧೨೫
೯.೬ ತಿರುಳು ೧೧೪೧

**೧೦ ತೋರುಪದಗಳು ೧೧೪೩**
೧೦.೧ ಮುನ್ನೋಟ ೧೧೪೫
೧೦.೨ ತೋರುಪದಗಳ ಹರವು ೧೧೬೩
೧೦.೩ ತಿಳಿದ ತೋರುಪದಗಳ ಬಳಕೆ: ಹೊರತೋರ್ಕೆ ೧೨೦೫
೧೦.೪ ತಿಳಿದ ತೋರುಪದಗಳ ಬಳಕೆ: ಒಳತೋರ್ಕೆ ೧೨೨೭

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

೧೦.೫ ತಿಳಿಯದ ತೋರುಪದಗಳು ಕೇಳ್ವಿಪದಗಳಲ್ಲ ೧೨೬೫
೧೦.೬ ತಿಳಿಯದ ತೋರುಪದಗಳ ಬಳಕೆ ೧೨೭೬
೧೦.೭ ತಿರುಳು ೧೩೧೪

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

# ಸೊಲ್ಲರಿಮೆ-೫ರ ಒಳಪಿಡಿ

## ೧೧ನೇ ಪಸುಗೆ : ಪರಿಚೆಪದಗಳು


**೧೧.೧ ಮುನ್ನೋಟ** **೧೩೩೫**
೧೧.೧.೧ ಪದಗಳ ಗುಂಪುಗಳು ೧೩೩೫
೧೧.೧.೨ ಪರಿಚೆಪದಗಳ ಕೆಲಸ ೧೩೩೫
೧೧.೧.೩ ತಿಳಿವುಪದ ಮತ್ತು ಕೆಲಸಪದ ೧೩೩೯
೧೧.೧.೪ ಹೆಚ್ಚಿನ ಕೆಲಸಗಳು ೧೩೪೧

**೧೧.೨ ಪರಿಚೆಪದಗಳ ಇಟ್ಟಳ** **೧೩೪೩**
೧೧.೨.೧ ಪರಿಚೆಬೇರುಗಳ ಬಳಕೆ ೧೩೪೪
೧೧.೨.೨ ಅಣಕಬೇರುಗಳ ಬಳಕೆ ೧೩೪೫
೧೧.೨.೩ ಎಸಕಪದಗಳಿಂದ ಪಡೆದ ಪರಿಚೆಪದಗಳು ೧೩೪೮
೧೧.೨.೪ ಹೆಸರುಪದಗಳಿಂದ ಪಡೆದ ಪರಿಚೆಪದಗಳು ೧೩೫೧
೧೧.೨.೫ ಹೆಸರುಪರಿಚೆಗಳಿಂದ ಪಡೆದ ಎಸಕಪರಿಚೆಗಳು ೧೩೫೩
೧೧.೨.೬ ಎಸಕಪರಿಚೆಗಳಿಂದ ಪಡೆದ ಹೆಸರುಪರಿಚೆಗಳು ೧೩೫೪
೧೧.೨.೭ ತಿರುಳು ೧೩೫೬

**೧೧.೩ ಹೆಸರುಪರಿಚೆಗಳ ಬೇರ್ಪಡಿಕೆ** **೧೩೫೭**
೧೧.೩.೧ ಹೆಸರುಪದಗಳಿಂದ ಬೇರ್ಪಡಿಸುವುದು ೧೩೫೭
(೧) ಒಂದು ಪರಿಚೆಯನ್ನಶ್ಟೇ ಕಚಿತವಾಗಿ ತಿಳಿಸುವುದು ೧೩೫೮
(೨) ಪರಿಚೆಯನ್ನು ತಿಳಿಸುವುದೇ ಮುಕ್ಯವಾಗಿರುವುದು ೧೩೬೨
(೩) ಹೆಸರುಕಂತೆಯ ಅಂಗವಾಗಿರುವುದು ೧೩೬೩
(೪) ಪದರೂಪಗಳಲ್ಲಿ ಬೇರ್ಮೆ ೧೩೬೪
(೫) ಹುರುಳಿನಲ್ಲಿ ಬೇರ್ಮೆ ೧೩೬೫
೧೧.೩.೨ ಹೆಸರುಪದಗಳ ಹೆಚ್ಚಿನ ಬಳಕೆ ೧೩೬೬
(೧) ಒಂದು ಪರಿಚೆಯನ್ನಶ್ಟೇ ತಿಳಿಸುವುದು ೧೩೬೭
(೨) ನೇರವಾಗಿ ಒಂದು ಪರಿಚೆಯನ್ನು ತಿಳಿಸುವುದು ೧೩೬೮
(೩) ಹೆಸರುಕಂತೆಯ ಅಂಗವಾಗಿರುವುದು ೧೩೭೪
೧೧.೩.೩ ಹೆಸರುಪರಿಚೆಗಳ ಹೆಚ್ಚಿನ ಬಳಕೆಗಳು ೧೩೭೫
(೧) ಸೊಲ್ಲುಗಳ ತಿರುಳುಪದಗಳಾಗಿ ಬಳಕೆ ೧೩೭೬
(೨) ಹೆಸರುಕಂತೆಗಳಲ್ಲಿ ತಿರುಳುಪದಗಳಾಗಿ ಬಳಕೆ ೧೩೮೨
೧೧.೩.೪ ಎಸಕಪದಗಳಿಂದ ಬೇರ್ಪಡಿಸುವುದು ೧೩೮೫
(೧) ಅವುಗಳ ಮುಕ್ಯ ಕೆಲಸಗಳು ಬೇರೆ ೧೩೮೬
(೨) ಕೆಲಸಗಳನ್ನು ನಡೆಸುವ ಹಂತಗಳು ಬೇರೆ ೧೩೮೮


© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೩) ಹೊತ್ತಿನೊಂದಿಗಿನ ಪತ್ತುಗೆ ಬೇರೆ ೧೩೯೦
(೪) ಜೋಡುಪದಗಳಲ್ಲಿ ಬಳಕೆಯಾಗುವ ಬಗೆ ಬೇರೆ ೧೩೯೧
೧೧.೩.೫ ಎಸಕಪದಗಳ ಹೆಚ್ಚಿನ ಬಳಕೆಗಳು ೧೩೯೨
(೧) ಹೊತ್ತಿನ ಪತ್ತುಗೆಯನ್ನು ಬಿಡಲಾಗದು ೧೩೯೩
(೨) ಪರಿಚೆರೂಪದ ಹಿಂದೆ ಇಡೀ ಸೊಲ್ಲಿರುತ್ತದೆ ೧೩೯೫
(೩) ಪದಕಂತೆಯ ಅಂಗವಾಗಿರುವುದು ೧೩೯೫
೧೧.೩.೬ ಹೆಸರುಪರಿಚೆಗಳ ಹೆಚ್ಚಿನ ಬಳಕೆಗಳು ೧೩೯೭
೧೧.೩.೭ ಗುಂಪಳಿತ ಮತ್ತು ಮರುಗುಂಪಿಕೆ ೧೪೦೦
೧೧.೩.೮ ತೋರುಪದಗಳಿಂದ ಬೇರ್ಪಡಿಸುವುದು ೧೪೦೧
೧೧.೩.೯ ತಿರುಳು ೧೪೦೩

**೧೧.೪ ಹೆಸರುಪರಿಚೆಗಳ ಗುಂಪುಗಳು ೧೪೦೪**
೧೧.೪.೧ ಮುನ್ನೋಟ ೧೪೦೪
೧೧.೪.೨ ಆಯಪರಿಚೆಯ ಪದಗಳು ೧೪೦೫
(೧) ಅಳತೆಯ ಪದಗಳು ೧೪೦೬
(೨) ಎದುರುಹುರುಳಿನ ಪದಗಳು ೧೪೧೦
೧೧.೪.೩ ಆಳ್ಪರಿಚೆಯ ಪದಗಳು ೧೪೧೨
೧೧.೪.೪ ಪುರುಳ್ಪರಿಚೆಯ ಪದಗಳು ೧೪೧೪
೧೧.೪.೫ ಬೆಲೆಪರಿಚೆಯ ಪದಗಳು ೧೪೨೪
೧೧.೪.೬ ಹರಯಪರಿಚೆಯ ಪದಗಳು ೧೪೨೫
೧೧.೪.೭ ಅಳವಿಪರಿಚೆಯ ಪದಗಳು ೧೪೨೬
೧೧.೪.೮ ಎದುರುಹುರುಳಿನ ಪದಜೋಡಿಗಳು ೧೪೨೭
(೧) ಕೂಡುಹುರುಳು ಮತ್ತು ಕಳೆಹುರುಳು ೧೪೨೭
(೨) ಮುಚ್ಚಿದ ಮತ್ತು ತೆರೆದ ತುದಿಗಳು ೧೪೨೯
೧೧.೪.೯ ತಿರುಳು ೧೪೩೦

**೧೧.೫ ಹೆಸರುಪರಿಚೆಗಳ ಬಳಕೆ ೧೪೩೧**
೧೧.೫.೧ ಹೆಸರುಕಂತೆಗಳಲ್ಲಿ ನೆರವುಪದಗಳಾಗಿ ಬಳಕೆ ೧೪೩೧
(೧) ಹೆಸರುಪರಿಚೆಗಳ ಜಾಗ ೧೪೩೨
(೨) ಒಂದಕ್ಕಿಂತ ಹೆಚ್ಚು ಹೆಸರುಪರಿಚೆಗಳ ಬಳಕೆ ೧೪೩೪
(೩) ಹಂತ ಮತ್ತು ಹೋಲಿಕೆಯ ಹುರುಳುಗಳು ೧೪೩೪
(೪) ಎರಡು ಬಗೆಯ ಬಳಕೆಗಳು ೧೪೩೬
(೫) ಅಡ್ಡಹಾಯುವ ಮತ್ತು ಒಳಗೊಳ್ಳುವ ಪತ್ತುಗೆಗಳು ೧೪೩೭
(೬) ಬೇರೆ ಬಗೆಯ ಪದಕಂತೆಗಳಲ್ಲಿ ಬಳಕೆ ೧೪೪೦
೧೧.೫.೨ ಸೊಲ್ಲುಗಳ ತಿರುಳುಪದವಾಗಿ ಬಳಕೆ ೧೪೪೧
(೧) ಬಳಕೆಯಲ್ಲಿ ಕಟ್ಟುಪಾಡುಗಳು ೧೪೪೪
(೨) ಪಾಂಗುಗಳೊಂದಿಗೆ ಬಳಕೆ ೧೪೪೬
(೩) ಎದುರುಹುರುಳಿನ ಪದಜೋಡಿಗಳು ೧೪೪೮
(೪) ಆಗಿರು ಇಲ್ಲವೇ ಇರು ಎಂಬುದರ ಬಳಕೆ ೧೪೫೦

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೫) ಹಂತ ಮತ್ತು ಹೋಲಿಕೆಯ ಹುರುಳುಗಳು ೧೪೫೪
(೬) ಆಗು ಮತ್ತು ಮಾಡು ಎಂಬವುಗಳೊಂದಿಗೆ ಬಳಕೆ ೧೪೫೫
೧೧.೫.೩ ಎಸಕಪದಗಳ ಪರಿಚೆಯನ್ನು ತಿಳಿಸುವಲ್ಲಿ ಬಳಕೆ ೧೪೫೮
೧೧.೫.೪ ಹೆಸರುಕಂತೆಗಳ ತಿರುಳುಪದವಾಗಿ ಬಳಕೆ ೧೪೬೧
೧೧.೫.೫ ಜೋಡುಪದಗಳಲ್ಲಿ ಬಳಕೆ ೧೪೬೮
೧೧.೫.೬ ತಿರುಳು ೧೪೬೯

**೧೧.೬ ಎಸಕಪರಿಚೆಗಳ ಬೇರ್ಪಡಿಕೆ ೧೪೭೦**
೧೧.೬.೧ ಮುನ್ನೋಟ ೧೪೭೦
೧೧.೬.೨ ಹೆಸರುಪರಿಚೆಗಳಿಂದ ಬೇರ್ಪಡಿಸುವುದು ೧೪೭೧
(೧) ಕೆಲಸದಲ್ಲಿ ಹೋಲಿಕೆ ಮತ್ತು ಬೇರ್ಮೆ ೧೪೭೨
(೨) ಸೊಲ್ಲಿನ ತಿರುಳುಪದವಾಗಿ ಬಳಕೆ ೧೪೭೬
(೩) ಆಗು ಮತ್ತು ಮಾಡು ಎಂಬವುಗಳೊಂದಿಗೆ ಬಳಕೆ ೧೪೭೮
(೪) ಹುರುಳಿನಲ್ಲಿ ಬೇರ್ಮೆ ೧೪೭೯
(೫) ಹಂತಪದ ಮತ್ತು ಹೋಲಿಕೆ ನುಡಿತದೊಡನೆ ಬಳಕೆ ೧೪೮೦
(೬) ಜೋಡುಪದ ಮತ್ತು ಕೂಡುಪದಗಳಲ್ಲಿ ಬಳಕೆ ೧೪೮೧
೧೧.೬.೩ ಹೆಸರುಪದಗಳಿಂದ ಬೇರ್ಪಡಿಸುವುದು ೧೪೮೪
೧೧.೬.೪ ಎಸಕಪದಗಳಿಂದ ಬೇರ್ಪಡಿಸುವುದು ೧೪೮೭

೧೧.೬.೫ ಹೊತ್ತು ಮತ್ತು ಇಂಬಿನ ಪದಗಳು ೧೪೮೮
೧೧.೬.೬ ತಿರುಳು ೧೪೯೦

**೧೧.೭ ಎಸಕಪರಿಚೆಗಳನ್ನು ಗುಂಪಿಸುವ ಬಗೆಗಳು ೧೪೯೨**
೧೧.೭.೧ ಮುನ್ನೋಟ ೧೪೯೨
೧೧.೭.೨ ಬಗೆಪರಿಚೆಯ ಪದಗಳು ೧೪೯೩
(೧) ಅಗೆ ಒಟ್ಟನ್ನು ಬಳಸಿ ಪಡೆದ ಪದಗಳು ೧೪೯೩
(೨) ಅಣಕಪದಗಳನ್ನು ಬಳಸಿ ಪಡೆದ ಪದಗಳು ೧೪೯೪
೧೧.೭.೩ ಹಂತಪರಿಚೆಯ ಪದಗಳು ೧೪೯೫
೧೧.೭.೪ ಇಂಬುಪರಿಚೆಯ ಪದಗಳು ೧೪೯೬
(೧) ಪದರೂಪಗಳು ೧೪೯೭
(೨) ಆಡುಗನ ಇಂಬಿನೊಂದಿಗೆ ಹೊಂದಿಕೆ ೧೫೦೧
(೩) ಸರಿಬದಿಯ ಪದಗಳು ೧೫೦೨
೧೧.೭.೫ ಹೊತ್ತುಪರಿಚೆಯ ಪದಗಳು ೧೫೦೩
(೧) ಹೊತ್ತಿನ ಬಗೆಗಳು ೧೫೦೩
(೨) ಆಡುಗನ ಹೊತ್ತಿನೊಂದಿಗೆ ಹೊಂದಿಕೆ ೧೫೦೬
೧೧.೭.೬ ತಿರುಳು ೧೫೧೧

**೧.೮ ಎಸಕಪರಿಚೆಗಳ ಬಳಕೆ ೧೫೧೨**
೧೧.೮.೧ ಎಸಕದ ಪರಿಚೆಯನ್ನು ತಿಳಿಸುವ ಬಳಕೆ ೧೫೧೨

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

೧೧.೮.೨ ಬಗೆಪರಿಚೆಯ ಪದಗಳು ೧೫೧೩
೧೧.೮.೩ ಹಂತಪರಿಚೆಯ ಪದಗಳು ೧೫೧೭
೧೧.೮.೪ ಇಂಬುಪರಿಚೆಯ ಪದಗಳು ೧೫೧೯
(೧) ಇಂದ ಮತ್ತು ಗೆ ಒಟ್ಟುಗಳ ಹೆಚ್ಚಿನ ಹುರುಳುಗಳು ೧೫೨೦
(೨) ಅಲ್ಲಿ ಒಟ್ಟಿನ ಬಳಕೆಗಳು ೧೫೨೪
(೩) ಇಂಬಿನ ಪರಿಚೆಪದಗಳು ಮತ್ತು ಪತ್ತುಗೆ ಒಟ್ಟುಗಳು ೧೫೨೫
(೪) ಇಂಬಿನ ಪದಗಳ ಬಳಕೆ ೧೫೨೬
(೫) ಎಸಕಪದಗಳು ತಿಳಿಸುವ ಇಂಬಿನ ಹುರುಳು ೧೫೨೭
೧೧.೮.೫ ಹೊತ್ತುಪರಿಚೆಯ ಪದಗಳು ೧೫೨೯
(೧) ಒಮ್ಮೆಗಿನ ಎಸಕಗಳನ್ನು ತಿಳಿಸುವುದು ೧೫೩೧
(೨) ಎಸಕಗಳ ವರಸೆಯನ್ನು ತಿಳಿಸುವುದು ೧೫೩೩
(೩) ಎಡೆಹೊತ್ತಿನ ಎಸಕಗಳ ವರಸೆ ೧೫೩೫
(೪) ಎಸಕಗಳ ಎಡೆಹೊತ್ತು ೧೫೩೭
(೫) ಎಸಕಗಳ ಹೊತ್ತಿನ ಹರವು ೧೫೩೯
(೬) ಎಸಕಗಳ ಸಲದೆಣಿಕೆ ೧೫೪೦
೧೧.೮.೬ ಹೊತ್ತಿನ ಪದಗಳಾಗಿ ಇಂಬಿನ ಪದಗಳು ೧೫೪೦
(೧) ಮಾರ್ಪುರುಳಿನ ಬಳಕೆ ೧೫೪೧
(೨) ಹೊತ್ತನ್ನು ಕಾಣುವುದರಲ್ಲಿ ಬಗೆಗಳು ೧೫೪೨
(೩) ಎರಡು ಬಗೆಯ ಪತ್ತುಗೆಗಳು ೧೫೪೩
೧೧.೮.೭ ಆಡುಗಪರಿಚೆಯ ಪದಗಳು ೧೫೪೪
೧೧.೮.೮ ಸೊಲ್ಲುಗಳ ತಿರುಳುಪದಗಳಾಗಿ ಬಳಕೆ ೧೫೪೫
೧೧.೮.೯ ಹೆಸರುಕಂತೆಗಳಲ್ಲಿ ನೆರವುಪದಗಳಾಗಿ ಬಳಕೆ ೧೫೪೮
೧೧.೮.೧೦ ಬೇರೆ ಪದಗಳ ಬಳಕೆ ೧೫೪೯
(೧) ಹೆಸರುಪರಿಚೆಗಳ ಬಳಕೆ ೧೫೪೯
(೨) ಹೆಸರುಪದಗಳ ಬಳಕೆ ೧೫೫೦
(೩) ಎಸಕಪದಗಳ ಬಳಕೆ ೧೫೫೧
೧೧.೮.೧೧ ತಿರುಳು ೧೫೫೨

**೧೧.೯ ಹಂತಪದಗಳು ಮತ್ತು ಹೋಲಿಕೆಯ ನುಡಿತಗಳು ೧೫೫೩**
೧೧.೯.೧ ಮುನ್ನೋಟ ೧೫೫೩
೧೧.೯.೨ ಹಂತಪದಗಳ ಬಳಕೆ ೧೫೫೪
೧೧.೯.೩ ಹಂತಪದಗಳ ಗುಂಪುಗಳು ೧೫೫೬
೧೧.೯.೪ ಇಮ್ಮಡಿ ರೂಪಗಳು ೧೫೬೧
೧೧.೯.೫ ಹೋಲಿಕೆ ನುಡಿತಗಳ ಬಳಕೆ ೧೫೬೩
(೧) ಹೋಲಿಕೆಯ ಬೇರೆ ಸೊಲ್ಲಿಟ್ಟಳಗಳು ೧೫೬೪
(೨) ಮಾದರಿ ಮತ್ತು ಹೋಲಿಕೆಯ ಪಾಂಗುಗಳು ೧೫೬೭
(೩) ಪರಿಚೆಪಟ್ಟಿಗಳು ೧೫೬೮
೧೧.೯.೬ ಹೆಸರುಪರಿಚೆಗಳ ಹಲವು ಬಳಕೆಗಳು ೧೫೭೧
೧೧.೯.೬ ಎಸಕಪರಿಚೆಗಳ ಹೆಚ್ಚಿನ ಬಳಕೆಗಳು ೧೫೭೪

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

೧೧.೯.೭ ತಿರುಳು ೧೫೭೬

## ೧೨ನೇ ಪಸುಗೆ : ಎಣಿಕೆಪದಗಳು

**೧೨.೧ ಮುನ್ನೋಟ** **೧೫೭೯**
೧೨.೧.೧ ಎಣಿಕೆಪದಗಳ ಪರಿಚೆ ೧೫೭೯
೧೨.೧.೨ ಎಣಿಕೆಪದಗಳ ಕೆಲಸ ೧೫೮೦

**೧೨.೨ ಎಣಿಕೆಪದಗಳ ಬೇರ್ಪಡಿಕೆ** **೧೫೮೪**
೧೨.೨.೧ ಮುನ್ನೋಟ ೧೫೮೪
೧೨.೨.೨ ಹೆಸರುಪದಗಳಿಂದ ಬೇರ್ಪಡಿಸುವುದು ೧೫೮೫
೧೨.೨.೩ ಹೆಸರುಪರಿಚೆಗಳಿಂದ ಬೇರ್ಪಡಿಸುವುದು ೧೫೮೯
೧೨.೨.೪ ತಿರುಳು ೧೫೯೨

**೧೨.೩ ಎಣಿಕೆಪದಗಳ ಇಟ್ಟಳ** **೧೫೯೩**
೧೨.೩.೧ ಮುನ್ನೋಟ ೧೫೯೩
೧೨.೩.೨ ಎಣಿಕೆಪದಗಳ ರೂಪಗಳು ೧೫೯೫
೧೨.೩.೩ ಪಾಂಗುಗಳ ಗುರ್ತು ಮತ್ತು ಎಣಿಕೆ ೧೫೯೮
೧೨.೩.೪ ಹತ್ತಕ್ಕಿಂತ ಮೇಲಿನ ಎಣಿಕೆಪದಗಳು ೧೬೦೦
೧೨.೩.೫ ಹಸುಗೆಗಳನ್ನು ತಿಳಿಸುವ ಬಗೆ ೧೬೦೪
೧೨.೩.೬ ಓರಣದೆಣಿಕೆ ೧೬೦೫
೧೨೩.೭ ತಿರುಳು ೧೬೦೮

**೧೨..೪ ಎಣಿಕೆಪದಗಳ ಬಳಕೆ** **೧೬೦೯**
೧೨.೪.೧ ಮುನ್ನೋಟ ೧೬೦೯
೧೨.೪.೨ ಪಾಂಗುಗಳ ಎಣಿಕೆಯನ್ನು ತಿಳಿಸುವ ಬಗೆ ೧೬೧೦
(೧) ಹೆಸರುಕಂತೆಗಳಲ್ಲಿ ಜಾಗ ೧೬೧೧
(೨) ಹೆಸರುಪದಗಳ ಬಗೆಗಳು ೧೬೧೪
(೩) ಹಂಚಿಕೆಯ ಹುರುಳಿನಲ್ಲಿ ಇಮ್ಮಡಿರೂಪಗಳ ಬಳಕೆ ೧೬೧೬
(೪) ಕಚಿತವಲ್ಲದ ಎಣಿಕೆ ೧೬೧೭
(೫) ಸೊಲ್ಲಿನ ತಿರುಳುಪದವಾಗಿ ಬಳಕೆ ೧೬೧೯
೧೨.೪.೩ ಪಾಂಗುಗಳನ್ನು ಗುರುತಿಸುವ ಬಳಕೆ ೧೬೨೧
೧೨.೪.೪ ಎಣಿಕೆಯನ್ನು ಗುರುತಿಸುವ ಬಳಕೆ ೧೬೨೪
೧೨.೪.೫ ಓರಣದೆಣಿಕೆಯ ಬಳಕೆ ೧೬೨೫
೧೨.೪.೬ ತಿರುಳು ೧೬೨೯

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

# ಕೆಲವು ಅರಿಮೆಯ ಪದಗಳು

ಅಣಕಪದ imitative word
ಅಲ್ಲಗಳೆತ negation
ಅಳತೆಪಟ್ಟಿ scale
ಅಳವಿ quantity
ಆಗಿಸುವ ರೂಪ causative form
ಆಗುಗ patient, theme
ಆಡುಗ speaker, first person
ಆಡುಪದ personal pronoun
ಆಯ dimension
ಇಂಬು place
ಇಟ್ಟಳ structure
ಇಪ್ಪುರುಳು ambiguity
ಇಮ್ಮಡಿರೂಪ reduplicated form
ಇರುವ ಹೆಸರು common noun
ಇರುಹ state
ಈಡು patient, theme
ಈಪೊತ್ತು present tense
ಉಳಿಕೆಗುರ್ತ neuter gender
ಎಡೆಹೊತ್ತು duration
ಎಣಿಕೆ number
ಎಣಿಕೆಪದ numeral
ಎತ್ತಿಹೇಳು quote
ಎತ್ತುಗೆ example
ಎದುರುಹುರುಳು antonym
ಎಸಕ event
ಎಸಕಪತ್ತುಗೆ case
ಎಸಕಪದ verb
ಎಸಕಪರಿಚೆ adverb
ಒಟ್ಟಲು ಹೆಸರು mass noun
ಒಟ್ಟು affix, suffix
ಒತ್ತಿಹೇಳುವ emphatic
ಒಮ್ಮೆಗಿನ sequential

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಒಳಸೊಲ್ಲು embedded sentence
ಓರಣ order
ಓರಣದೆಣಿಕೆ ordinal number
ಓರೆಣಿಕೆ singular number
ಕಟ್ಟಲೆ rule
ಕಟ್ಟುಪಾಡು restriction
ಕತ cause
ಕದಲಿಕೆ movement
ಕದಲಿಸು move, shift
ಕಳೆಹುರುಳು negative meaning
ಕುಳ್ಳಿಹ context
ಕೂಡಿಕೆಯ additive
ಕೂಡುಪದ verbal compound
ಕೂಡುಹುರುಳು positive meaning
ಕೇಳುಗ addressee, second person
ಕೊಗೆತ description
ಕೊಟ್ಟ ಹೆಸರು proper noun
ಕೊನೆರೂಪ finite form
ಗಂಡುಗುರ್ತು masculine gender
ಗುಂಪಳಿತ decategorization
ಗುಂಪಿಸು categorize, group
ಗುರ್ತು gender
ಗುರಿ goal
ಗುರುತಿಸುವಿಕೆ reference
ಜಾಗ location
ಜೋಡುಪದ compound
ತಿರುಳುಪದ nucleus
ತಿಳಿಯದ ತೋರುಪದ indefinite pronoun
ತೆರೆಯುಲಿ vowel
ತೋರುಪದ demonstrative pronoun
ನಡುರೂಪ non-finite form
ನನಸಿನ concrete, real
ನುಡಿತ expression
ನೆನಸಿನ abstract, unreal

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ನೆರವೆಸಕಪದ auxiliary verb
ನೆಲೆಗೊಳಿಕೆ grounding
ಪತ್ತುಗೆ relation
ಪತ್ತುಗೆ ಹೊತ್ತು reference time
ಪದಕಂತೆ phrase
ಪರಿಚೆ property, characteristic
ಪರಿಚೆಪದ adjective, adverb
ಪರಿಜು form, shape
ಪಸುಗೆ chapter
ಪಾಂಗು role, object
ಪುರುಳು object, thing
ಪೆಚ್ಚಿಕೆ multiplication
ಬಗೆ divide
ಬಗೆಪರಿಚೆ manner adverb
ಬೆರಗು exclamation
ಬೇರ್ಮೆ distinction, difference
ಬೇರು root
ಮದಿಪಿನ honorific
ಮರುಗುಂಪಿಕೆ recategorization
ಮಾಡುಗ doer
ಮಾದರಿ standard
ಮಾರುಲಿರೂಪ echo-word
ಮುಂಬೊತ್ತು future tense
ಮುಚ್ಚುಲಿ consonant
ಮೇಲ್ವಾಯು overlap
ವರಸೆ sequence
ಸರಿಗಟ್ಟು equate
ಸರಿಗಟ್ಟುವ equational
ಸುರು source
ಸೇರಿಸುವ ರೂಪ reflexive form
ಸೊಲ್ಲು sentence
ಹಂಚಿಕೆಯ distributive
ಹಂತ stage
ಹಂತಪರಿಚೆ degree adverb

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಹರಯ age
ಹರವು extension, spread
ಹಲವೆಣಿಕೆ plural number
ಹಿಂಬೊತ್ತು past tense
ಹಿನ್ನುಡಿತ antecedent
ಹುರುಳು meaning
ಹೆಣ್ಣುಗುರ್ತ feminine gender
ಹೆರತು third person

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

## ಹನ್ನೊಂದನೆಯ ಪಸುಗೆ

# ಪರಿಚೆಪದಗಳು

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

# ೧೧.೧ ಮುನ್ನೋಟ

### ೧೧.೧.೧ ಪದಗಳ ಗುಂಪುಗಳು

ಸೊಲ್ಲುಗಳಲ್ಲಿ ಬಳಕೆಯಾಗುವ ಪದಗಳನ್ನು ಅವುಗಳ ಒಳರಚನೆ ಮತ್ತು ಬಳಕೆಗಳನ್ನವಲಂಬಿಸಿ ಗುಂಪಿಸಲು ಬರುತ್ತದೆ; ಇವುಗಳಲ್ಲಿ ಎಸಕಪದಗಳು, ಹೆಸರುಪದಗಳು, ಆಡುಪದಗಳು, ಮತ್ತು ತೋರುಪದಗಳು ಎಂಬ ನಾಲ್ಕು ಗುಂಪುಗಳಲ್ಲಿ ಬರುವ ಪದಗಳು ಎಂತಹವು, ಮತ್ತು ಅವು ಒಂದರಿಂದೊಂದು ಹೇಗೆ ಬೇರೆ ಬೇರಾಗಿವೆ ಎಂಬುದನ್ನು ಮೇಲಿನ ಪಸುಗೆಗಳಲ್ಲಿ ವಿವರಿಸಲಾಗಿದೆ.

ಈ ನಾಲ್ಕು ಗುಂಪುಗಳಿಂದ ಹಲವು ವಿಶಯಗಳಲ್ಲಿ ಬೇರಾಗಿರುವ ಪರಿಚೆಪದಗಳು ಎಂಬ ಅಯ್ದನೇ ಗುಂಪಿನ ಪದಗಳ ಕುರಿತಾಗಿ ಹಲವು ಬಗೆಯ ವಿವರಗಳನ್ನು ಈ ಪಸುಗೆಯಲ್ಲಿ ಕೊಡಲಾಗಿದೆ; ಇವನ್ನು ಹೆಸರುಪರಿಚೆ ಮತ್ತು ಎಸಕಪರಿಚೆ ಎಂಬ ಎರಡು ಒಳಗುಂಪುಗಳಾಗಿ ಒಡೆಯಲು ಬರುತ್ತಿದ್ದು, ಅವುಗಳ ನಡುವಿನ ಬೇರ್ಮೆಗಳನ್ನೂ ಇಲ್ಲಿ ವಿವರಿಸಲಾಗಿದೆ. ಇದಲ್ಲದೆ, ಎಣಿಕೆಪದಗಳು ಎಂಬ ಬೇರೊಂದು ಗುಂಪಿನ ಕುರಿತಾಗಿ ವಿವರಗಳನ್ನು ಮುಂದಿನ (೧೨ನೇ) ಪಸುಗೆಯಲ್ಲಿ ಕೊಡಲಾಗುತ್ತದೆ.

### ೧೧.೧.೨ ಪರಿಚೆಪದಗಳ ಕೆಲಸ

ಒಂದು ಪದ ತಿಳಿಸುವ ಪಾಂಗಿನ ಇಲ್ಲವೇ ಎಸಕದ ಪರಿಚೆಯನ್ನು ತಿಳಿಸುವುದೇ ಪರಿಚೆಪದಗಳ ಮುಕ್ಯ ಕೆಲಸವೆಂದು ಹೇಳಬಹುದು; ಈ ರೀತಿ ಪರಿಚೆಯನ್ನು ತಿಳಿಸುವುದರಿಂದ ಅವು ಪಾಂಗನ್ನು ಗುರುತಿಸುವ ಹೆಸರುಪದಗಳ, ಇಲ್ಲವೇ ಎಸಕವನ್ನು ತಿಳಿಸುವ ಎಸಕಪದಗಳ ಹುರುಳನ್ನು ಹೆಚ್ಚಿಸುತ್ತವೆ, ಮತ್ತು ಹೆಸರುಪದಗಳು ಗುರುತಿಸಬಲ್ಲ ಪಾಂಗುಗಳ ಮತ್ತು ಎಸಕಪದಗಳು ತಿಳಿಸಬಲ್ಲ ಎಸಕಗಳ ಹರವನ್ನು ಕಡಿಮೆ ಮಾಡುತ್ತವೆ.

ಎತ್ತುಗೆಗಾಗಿ, ಮನೆ ಎಂಬ ಹೆಸರುಪದ ತಿಳಿಸುವ ಪಾಂಗಿಗೆ ಇರಬಹುದಾದ ಹಲವು ಪರಿಚೆಗಳಲ್ಲಿ ಒಂದನ್ನು ಹೊಸ ಎಂಬ ಪರಿಚೆಪದ ತಿಳಿಸುತ್ತದೆ; ಹಾಗಾಗಿ, ಮನೆ ಎಂಬ ಹೆಸರುಪದ ತಿಳಿಸುವ ಪಾಂಗುಗಳಲ್ಲಿ ಕೆಲವನ್ನಶ್ಟೇ ಹೊಸ ಮನೆ ಎಂಬ ಪದಕಂತೆ ಗುರುತಿಸಬಲ್ಲುದು; ಎಂದರೆ, ಹೊಸ ಮನೆ ಎಂಬ ಪದಕಂತೆಯಲ್ಲಿ ಬಂದಿರುವ ಹೊಸ ಎಂಬ ಪರಿಚೆಪದ ಮನೆ ಎಂಬ ಹೆಸರುಪದದ ಹರವನ್ನು ಕಡಿಮೆ ಮಾಡಿದೆ.

ಈ ಕೆಲಸವನ್ನು ಹೊಸ ಎಂಬ ಪರಿಚೆಪದ ಮನೆ ಎಂಬ ಹೆಸರುಪದದ ಹುರುಳನ್ನು ಹೆಚ್ಚಿಸುವ ಮೂಲಕ ನಡೆಸುತ್ತದೆ ಎಂಬುದನ್ನೂ ಇಲ್ಲಿ ಗಮನಿಸಬಹುದು: ಮನೆ ಎಂಬುದಕ್ಕಿರುವ ಹುರುಳಿಗಿಂತ ಹೊಸ ಮನೆ ಎಂಬುದಕ್ಕೆ ಹೆಚ್ಚು ಹುರುಳಿದೆಯೆಂದು, ಎಂದರೆ ಹೊಸ ಮನೆ ಎಂಬುದು ಒಂದು ಪಾಂಗಿನ ಕುರಿತಾಗಿ ಮನೆ ಎಂಬ ಪದ ತಿಳಿಸುವುದಕ್ಕಿಂತ ಹೆಚ್ಚು ಸಂಗತಿಗಳನ್ನು ತಿಳಿಸುತ್ತದೆಯೆಂದು ಹೇಳಬಹುದು.

ಹೆಸರುಪದಗಳೊಂದಿಗಿನ ಬಳಕೆಯಲ್ಲಿ ಕಾಣಿಸುವ ಹಾಗೆ, ಎಸಕಪದಗಳೊಂದಿಗಿನ ಬಳಕೆಯಲ್ಲೂ ಪರಿಚೆಪದಗಳು ಅವುಗಳ ಹುರುಳನ್ನು ಹೆಚ್ಚಿಸುವ, ಮತ್ತು ಹಾಗೆ ಹೆಚ್ಚಿಸುವ ಮೂಲಕ ಅವುಗಳ ಹರವನ್ನು ಕಡಿಮೆಮಾಡುವ ಕೆಲಸವನ್ನು ನಡೆಸುತ್ತವೆ. ಎತ್ತುಗೆಗಾಗಿ, ಕಟ್ಟು ಎಂಬ ಎಸಕಪದ ತಿಳಿಸುವ ಎಸಕದಲ್ಲಿರಬಲ್ಲ ಪರಿಚೆಗಳಲ್ಲಿ ಒಂದನ್ನು ಅಳ್ಳಕ ಎಂಬ ಪರಿಚೆಪದ ತಿಳಿಸುತ್ತದೆ, ಮತ್ತು ಹಾಗೆ ತಿಳಿಸುವ ಮೂಲಕ ಅದು ಆಕೆ ಕೂದಲನ್ನು ಅಳ್ಳಕ ಕಟ್ಟಿದಳು ಎಂಬ ಸೊಲ್ಲಿನಲ್ಲಿ ಕಟ್ಟು ಎಂಬ ಎಸಕಪದದ ಹುರುಳನ್ನು ಹೆಚ್ಚಿಸುತ್ತದೆ; ಇದಲ್ಲದೆ, ಆ ಎಸಕಪದ ತಿಳಿಸಬಲ್ಲ ಎಸಕಗಳ ಹರವನ್ನೂ ಕಡಿಮೆ ಮಾಡುತ್ತದೆ. ಯಾಕೆಂದರೆ, ಕಟ್ಟು ಎಂಬ ಎಸಕಪದ ತಿಳಿಸುವ ಎಸಕಗಳಲ್ಲಿ ಕೆಲವನ್ನು ಮಾತ್ರ ಅಳ್ಳಕ ಕಟ್ಟು ಎಂಬುದು ತಿಳಿಸಬಲ್ಲುದು.

ಪರಿಚೆಪದಗಳು ನಡೆಸಬೇಕಾಗಿರುವ ಈ ಕೆಲಸ ಎಸಕಪದ ಮತ್ತು ಹೆಸರುಪದಗಳು ನಡೆಸಬೇಕಾಗಿರುವ ಕೆಲಸಗಳಿಗಿಂತ ತೀರ ಬೇರಾಗಿದೆ. ಎಸಕಪದಗಳು ಸೊಲ್ಲುಗಳಲ್ಲಿ ಎಸಕಗಳನ್ನು ತಿಳಿಸುವ ಕೆಲಸವನ್ನು ನಡೆಸುತ್ತವೆ, ಮತ್ತು ಹೆಸರುಪದಗಳು ಇಂತಹ

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಎಸಕಗಳಲ್ಲಿ ತೊಡಗಿಕೊಂಡಿರುವ ಪಾಂಗುಗಳನ್ನು ಗುರುತಿಸುವ ಕೆಲಸವನ್ನು ನಡೆಸುತ್ತವೆ. ಎತ್ತುಗೆಗಾಗಿ ಕೆಳಗೆ ಕೊಟ್ಟಿರುವ ಸೊಲ್ಲನ್ನು ಗಮನಿಸಬಹುದು:

(೧) ರಾಜು ಹಸುವನ್ನು ಮರಕ್ಕೆ ಕಟ್ಟಿದ.

(೧)ನೇ ಸೊಲ್ಲಿನಲ್ಲಿ ಎಸಕವನ್ನು ತಿಳಿಸುವ ಕೆಲಸವನ್ನು ಕಟ್ಟು ಎಂಬ ಎಸಕಪದ ನಡೆಸಿದೆ, ಮತ್ತು ಆ ಎಸಕದಲ್ಲಿ ತೊಡಗಿಕೊಂಡಿರುವ ಮಾಡುಗ, ಈಡು ಮತ್ತು ಗುರಿ ಎಂಬ ಮೂರು ಪಾಂಗುಗಳನ್ನು ಗುರುತಿಸುವ ಕೆಲಸವನ್ನು ರಾಜು, ಹಸು, ಮತ್ತು ಮರ ಎಂಬ ಮೂರು ಹೆಸರುಪದಗಳು ನಡೆಸಿವೆ.

ಎಸಕಪದಗಳನ್ನು ಸೊಲ್ಲುಗಳ ತಿರುಳುಪದಗಳೆಂದು ತಿಳಿಯಲು ಬರುತ್ತದೆ; ಯಾಕೆಂದರೆ, ಅವು ಒಂದು ಸೊಲ್ಲು ತಿಳಿಸಬೇಕಾಗಿರುವ ಎಸಕದ ಕುರಿತಾಗಿ ಎಲ್ಲಾ ಸಂಗತಿಗಳನ್ನೂ ಅಡಕವಾಗಿ ತಿಳಿಸಬಲ್ಲುವು, ಮತ್ತು ಈ ಕಾರಣಕ್ಕಾಗಿ ಬೇರೆ ಯಾವ ಬಗೆಯ ನುಡಿತದ ನೆರವಿಲ್ಲದೆಯೂ ಅವು ನಿಲ್ಲಬಲ್ಲುವು.

ಎತ್ತುಗೆಗಾಗಿ ಬಿದ್ದೆ ಎಂಬ ಎಸಕರೂಪ ಒಂದು ಎಸಕವನ್ನು ಪೂರ್ತಿಯಾಗಿ ತಿಳಿಸಬಲ್ಲುದು. ಅದರಲ್ಲಿ ಬಂದಿರುವ ಬೀಳು ಎಂಬ ಎಸಕಪದದ ಬಿದ್ ಎಂಬ ರೂಪ ಬೀಳುವ ಎಸಕವನ್ನು ತಿಳಿಸುತ್ತದೆ; ಅದರ ಬಳಿಕ ಬಂದಿರುವ ದ್ ಎಂಬ ಹಿಂಬೊತ್ತಿನ ಒಟ್ಟು ಆ ಎಸಕದ ಹೊತ್ತನ್ನು (ಅದು ಆಡುಗನ ಹೊತ್ತಿಗಿಂತ ಮೊದಲು ನಡೆದಿದೆ ಎಂಬುದನ್ನು) ತಿಳಿಸುತ್ತದೆ; ಮತ್ತು ಅದರ ಬಳಿಕ ಬಂದಿರುವ ಎ ಎಂಬ ಗುರ್ತದ ಒಟ್ಟು ಆ ಎಸಕದ ಆಗುಗ ಪಾಂಗನ್ನು (ಅದು ಸೊಲ್ಲಿನ ಆಡುಗನೇ ಎಂಬುದಾಗಿ) ತಿಳಿಸುತ್ತದೆ.

ಆಗುಗ ಇಲ್ಲವೇ ಮಾಡುಗ ಪಾಂಗು ಯಾವುದು ಎಂಬುದನ್ನು ಎಸಕಪದಗಳು ತೀರ ಅಡಕವಾಗಿಯಷ್ಟೇ ತಿಳಿಸುತ್ತವೆ; ಇವುಗಳ ಕುರಿತಾಗಿ ಹಲವು ಹೆಚ್ಚಿನ ಸಂಗತಿಗಳನ್ನು ತಿಳಿಸುವುದಕ್ಕಾಗಿ, ಮತ್ತು ಅವುಗಳೊಂದಿಗೆ ಎಸಕಗಳಲ್ಲಿ ತೊಡಗಿಕೊಂಡಿರುವ ಈಡು, ಜಾಗ, ಸುರು, ಕೊನೆ ಮೊದಲಾದ ಬೇರೆಯೂ ಕೆಲವು ಹೆಚ್ಚಿನ ಪಾಂಗುಗಳನ್ನು ಗುರುತಿಸುವುದಕ್ಕಾಗಿ ಸೊಲ್ಲುಗಳಲ್ಲಿ ಹೆಸರುಪದಗಳನ್ನು ಬಳಸಬೇಕಾಗುತ್ತದೆ. ಹಾಗಾಗಿ ಹೆಸರುಪದಗಳು ಸೊಲ್ಲಿನಲ್ಲಿ ಎಸಕಪದಗಳ ನೆರವುಪದಗಳಾಗಿ ಬಳಕೆಯಾಗುತ್ತವೆ ಎಂದು ಹೇಳಬಹುದು.

ಈ ರೀತಿ ಬಳಕೆಯಾಗುವ ಹೆಸರುಪದಗಳ ಎಣಿಕೆ ಕೆಲವು ಸಾವಿರಗಳಶ್ಟಿದೆ. ಇವಕ್ಕೆ ಒಟ್ಟುಗಳನ್ನು ಸೇರಿಸಿ, ಇಲ್ಲವೇ ಜೋಡುಪದಗಳಲ್ಲಿ ಬಳಸಿ ಈ ಎಣಿಕೆಯನ್ನು ಇನ್ನಶ್ಟು ಹೆಚ್ಚಿಸಲು ಬರುತ್ತದೆ. ಆದರೆ, ಸೊಲ್ಲುಗಳಲ್ಲಿ ಗುರುತಿಸಬೇಕಾಗುವ ಪಾಂಗುಗಳ ಎಣಿಕೆ ಇದಕ್ಕಿಂತಲೂ ಎಶ್ಟೋ ಹೆಚ್ಚಿನದಾಗಿರುತ್ತದೆ. ಎತ್ತುಗೆಗಾಗಿ, ಹಾತೆ ಎಂಬ ಒಂದು ಹೆಸರುಪದ ತಿಳಿಸಬಲ್ಲ ನೂರಾರು ಬಗೆಯ ಪಾಂಗುಗಳಿದ್ದು, ಅವುಗಳಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸಿ ಗುರುತಿಸಲು ಬೇಕಾಗುವಶ್ಟು ಹೆಸರುಪದಗಳಿಲ್ಲ.

ಈ ಕೊರತೆಯನ್ನು ನೀಗುವುದಕ್ಕಾಗಿ ಪಾಂಗುಗಳನ್ನು ಗುರುತಿಸುವಲ್ಲಿ ಹೆಸರುಪದಗಳಿಗೆ ನೆರವನ್ನು ನೀಡುವಂತಹ ಕೆಲವು ಹೆಚ್ಚಿನ ಪದಗಳನ್ನು ಮತ್ತು ಪದರೂಪಗಳನ್ನು ಬಳಸಲಾಗುತ್ತದೆ. ಇವುಗಳ ನೆರವಿನಿಂದ ಹಲವು ಬಗೆಯ ಹೆಸರುಕಂತೆಗಳನ್ನು ಉಂಟುಮಾಡಲು ಬರುತ್ತದೆ, ಮತ್ತು ಈ ಹೆಸರುಕಂತೆಗಳನ್ನು ಬಳಸಿ ಯಾವುದೇ ಒಂದು ಪಾಂಗಿನ ಕೊಗೆತವನ್ನು ಕೊಟ್ಟು (ಬಿಳಿ ಹಾತೆ, ಕೆಂಪು ಹಾತೆ, ಬಣ್ಣ ಬಣ್ಣದ ಹಾತೆ, ಕೆಳಗಿನ ಹಾತೆ, ಮೇಲಿನ ಹಾತೆ) ಅದನ್ನು ಗುರುತಿಸುವ, ಮತ್ತು ಅಂತಹವೇ ಬೇರೆ ಬಗೆಯ ಪಾಂಗುಗಳಿಂದ ಬೇರ್ಪಡಿಸುವ ಕೆಲಸವನ್ನು ನಡೆಸಲು ಬರುತ್ತದೆ (೬.೧.೨ ನೋಡಿ).

ಇಂತಹ ಹೆಸರುಕಂತೆಗಳನ್ನು ಉಂಟುಮಾಡುವಲ್ಲಿ ಪಾಂಗುಗಳ ಪರಿಚೆಯನ್ನು ತಿಳಿಸುವ ಮೂಲಕ ಅವನ್ನು ಗುರುತಿಸುವಲ್ಲಿ ಹೆಸರುಪದಗಳಿಗೆ ನೆರವನ್ನು ನೀಡುವುದು ಎಂಬ ಕೆಲಸ ತುಂಬಾ ಅರಿದಾದುದು; ಈ ಕೆಲಸಕ್ಕಾಗಿ ಪರಿಚೆಪದಗಳು ಎಂಬ ಮೂರನೇ ಬಗೆಯ ಪದಗಳನ್ನು ಬಳಸಲಾಗುತ್ತದೆ. ಎತ್ತುಗೆಗಾಗಿ, ಕೆಳಗೆ ಕೊಟ್ಟಿರುವ ಸೊಲ್ಲನ್ನು ಗಮನಿಸಬಹುದು:

(೨) ರಾಜು ಬಿಳಿ ಹಸುವನ್ನು ದೊಡ್ಡ ಮರಕ್ಕೆ ಕಟ್ಟಿದ, ಮತ್ತು ಕಪ್ಪು ಹಸುವನ್ನು ಚಿಕ್ಕ ಮರಕ್ಕೆ ಕಟ್ಟಿದ.

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೨)ನೇ ಸೊಲ್ಲಿನಲ್ಲಿ ಹಸು ಮತ್ತು ಮರ ಎಂಬ ಹೆಸರುಪದಗಳ ಮೂಲಕ ಎರಡೆರಡು ಬಗೆಯ ಹಸುಗಳನ್ನು ಮತ್ತು ಮರಗಳನ್ನು ಗುರುತಿಸಬೇಕಾಗಿದೆ; ಅವುಗಳಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸುವುದಕ್ಕಾಗಿ, ಮತ್ತು ಅವುಗಳಲ್ಲಿ ಯಾವ ಹಸುವನ್ನು ಯಾವ ಮರಕ್ಕೆ ಕಟ್ಟಲಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಬಿಳಿ, ಕಪ್ಪು, ದೊಡ್ಡ, ಮತ್ತು ಚಿಕ್ಕ ಎಂಬ ಪರಿಚೆಪದಗಳನ್ನು ಆ ಹೆಸರುಪದಗಳೊಂದಿಗೆ ಬಳಸಿ, ಬಿಳಿ ಹಸು, ಕಪ್ಪು ಹಸು, ದೊಡ್ಡ ಮರ, ಚಿಕ್ಕ ಮರ ಎಂಬ ನಾಲ್ಕು ಹೆಸರುಕಂತೆಗಳನ್ನು ಉಂಟುಮಾಡಲಾಗಿದೆ.

ಈ ಬಗೆಯಲ್ಲಿ, ಒಂದು ಪಾಂಗನ್ನು ಇನ್ನೊಂದರಿಂದ ಬೇರ್ಪಡಿಸಿ ಗುರುತಿಸುವಲ್ಲಿ ಹೆಸರುಪದಗಳಿಗೆ ನೆರವನ್ನು ನೀಡುವುದೆಂಬ ಈ ಮೂರನೇ ಕೆಲಸವನ್ನು ನಡೆಸುವುದಕ್ಕಾಗಿ ಪರಿಚೆಪದಗಳನ್ನು ಬಳಸಲಾಗುತ್ತಿದ್ದು, ಅವು ಹೆಸರುಪದ ಮತ್ತು ಎಸಕಪದಗಳಿಂದ ಬೇರಾಗಿರುವ ಮೂರನೆಯ ಮುಕ್ಯ ಗುಂಪಿನಲ್ಲಿ ಸೇರುತ್ತವೆ.

ಮೇಲೆ ತಿಳಿಸಿದ ಹಾಗೆ, ಪಾಂಗುಗಳ ಪರಿಚೆಯನ್ನಶ್ಟೇ ಅಲ್ಲದೆ, ಎಸಕಗಳ ಪರಿಚೆಯನ್ನೂ ಪರಿಚೆಪದಗಳು ತಿಳಿಸಬಲ್ಲುವು. ಎತ್ತುಗೆಗಾಗಿ, ಕೆಳಗೆ ಕೊಟ್ಟಿರುವ ಸೊಲ್ಲುಗಳನ್ನು ಗಮನಿಸಬಹುದು:

(೩ಕ) *ಅವಳು ಕೂದಲನ್ನು ಗಟ್ಟಿ ಕಟ್ಟಿದ್ದಾಳೆ.*
(೩ಚ) *ಅವಳು ಕೂದಲನ್ನು ಅಳ್ಳಕ ಕಟ್ಟಿದ್ದಾಳೆ.*

ಕೂದಲನ್ನು ಎರಡು ಬಗೆಯಲ್ಲಿ ಕಟ್ಟಲು ಬರುತ್ತದೆ, ಮತ್ತು ಈ ಎರಡು ಬಗೆಯ ಎಸಕಗಳನ್ನು ಬೇರ್ಪಡಿಸಿ ಹೇಳಲು (೩ಕ–ಚ)ಗಳಲ್ಲಿ ಗಟ್ಟಿ ಮತ್ತು ಅಳ್ಳಕ ಎಂಬ ಪರಿಚೆಪದಗಳನ್ನು ಬಳಸಲಾಗಿದೆ. ಹಲವು ಬಗೆಯ ಪಾಂಗುಗಳನ್ನು ಗುರುತಿಸುವುದಕ್ಕಾಗಿ ಹೇಗೆ ಹೆಸರುಪದಗಳೊಂದಿಗೆ ಪರಿಚೆಪದಗಳನ್ನು ಬಳಸಲಾಗುತ್ತದೆಯೋ ಅದೇ ರೀತಿಯಲ್ಲಿ ಹಲವು ಬಗೆಯ ಎಸಕಗಳನ್ನು ತಿಳಿಸುವುದಕ್ಕಾಗಿ ಎಸಕಪದಗಳೊಂದಿಗೆ ಪರಿಚೆಪದಗಳನ್ನು ಬಳಸಲಾಗುತ್ತದೆ.

### ೧೧.೧.೩ ತಿಳಿವುಪದ ಮತ್ತು ಕೆಲಸಪದ

ಎಸಕಗಳನ್ನು ತಿಳಿಸುವುದು, ಪಾಂಗುಗಳನ್ನು ಗುರುತಿಸುವುದು, ಮತ್ತು ಎಸಕಗಳ ಇಲ್ಲವೇ ಪಾಂಗುಗಳ ಪರಿಚೆಯನ್ನು ತಿಳಿಸುವುದು ಎಂಬ ಈ ಮೂರು ಮುಕ್ಯ ಕೆಲಸಗಳು ಮಾತ್ರವಲ್ಲದೆ, ಬೇರೆಯೂ ಕೆಲವು ಕೆಲಸಗಳನ್ನು ನಡೆಸಲು ಸೊಲ್ಲುಗಳಲ್ಲಿ ಪದಗಳನ್ನು ಬಳಸಲಾಗುತ್ತದೆ, ಮತ್ತು ಈ ಕೆಲಸಗಳನ್ನವಲಂಬಿಸಿ, ಅವನ್ನು ಬೇರೆಯೂ ಕೆಲವು ಗುಂಪುಗಳಲ್ಲಿ ಗುಂಪಿಸಲು ಬರುತ್ತದೆ. ಆದರೆ, ಮೇಲಿನ ಮೂರು ಗುಂಪುಗಳಿಗೆ ಹೋಲಿಸಿದಲ್ಲಿ, ಅವುಗಳದು ತುಂಬಾ ಚಿಕ್ಕ ಚಿಕ್ಕ ಗುಂಪುಗಳು.

ಎತ್ತುಗೆಗಾಗಿ, ಎಸಕಗಳ ಕುರಿತಾಗಿ ಆಡುಗನ ನಿಲುವನ್ನು ತಿಳಿಸಲು ಬೇಕು, ಬಹುದು, ಒಲ್ (ಒಲ್ಲೆ) ಎಂಬಂತಹ ಕೆಲವು ನೆರವೆಸಕ ಪದಗಳನ್ನು ಬಳಸಲಾಗುತ್ತದೆ (೫.೫ ನೋಡಿ). ಸೊಲ್ಲಿನಲ್ಲಿ ಬಳಕೆಯಾಗಿರುವ ಪಾಂಗುಗಳು ಸೊಲ್ಲಿನ ಆಡುಗ, ಕೇಳುಗ, ಇಲ್ಲವೇ ಬೇರೊಬ್ಬ ಎಂಬುದನ್ನು ತಿಳಿಸಲು ನಾನು, ನೀನು, ಮತ್ತು ತಾನು ಎಂಬ ಆಡುಪದಗಳನ್ನು ಬಳಸಲಾಗುತ್ತದೆ (೯ನೇ ಪಸುಗೆ ನೋಡಿ).

ಪಾಂಗುಗಳನ್ನು ನೆಲೆಗೊಳಿಸಲು, ಮತ್ತು ಬೇರೆಯೂ ಕೆಲವು ಕೆಲಸಗಳನ್ನು ನಡೆಸಲು ಆ, ಈ, ಅವನು, ಅದು, ಅಲ್ಲಿ, ಇಲ್ಲಿ ಎಂಬಂತಹ ತೋರುಪದಗಳೆಂಬ ಇನ್ನೊಂದು ಬಗೆಯ ಪದಗಳನ್ನು ಬಳಸಲಾಗುತ್ತದೆ (೧೦ನೇ ಪಸುಗೆ ನೋಡಿ). ಪಾಂಗುಗಳ ಎಣಿಕೆಯನ್ನು ತಿಳಿಸಲು ಒಂದು, ಎರಡು, ಮೂರು, ಹತ್ತು, ನೂರು ಎಂಬಂತಹ ಎಣಿಕೆಪದಗಳೆಂಬ ಬೇರೊಂದು ಬಗೆಯ ಪದಗಳನ್ನು ಬಳಸಲಾಗುತ್ತದೆ (೧೨ನೇ ಪಸುಗೆ ನೋಡಿ). ಹೆಸರುಕಂತೆಗಳನ್ನು ಇಲ್ಲವೇ ಸೊಲ್ಲುಗಳನ್ನು ಒಟ್ಟು ಸೇರಿಸಲು ಮತ್ತು, ಇಲ್ಲವೇ, ಆದರೆ ಎಂಬಂತಹ ಸೇರಿಕೆಪದಗಳೆಂಬ ಬೇರೆ ಕೆಲವು ಪದಗಳನ್ನು ಇಲ್ಲವೇ ಪದರೂಪಗಳನ್ನು ಬಳಸಲಾಗುತ್ತದೆ.

ಈ ಹಲವು ಬಗೆಯ ಪದಗಳಲ್ಲಿ ಹೆಸರುಪದ, ಎಸಕಪದ ಮತ್ತು ಪರಿಚೆಪದ ಎಂಬ ಮೂರು ಬಗೆಯ ಪದಗಳನ್ನು ತಿಳಿವುಪದಗಳೆಂದು ಕರೆಯಬಹುದು, ಮತ್ತು ಆಡುಪದ, ತೋರುಪದ, ಎಣಿಕೆಪದ, ಸೇರಿಕೆಪದ, ನೆರವೆಸಕಪದ, ಇರುಹಪದ, ಮತ್ತು ಪತ್ತುಗೆಪದಗಳೆಂಬ ಉಳಿದ ಗುಂಪುಗಳಲ್ಲಿ ಸೇರುವ ಪದಗಳನ್ನು ಕೆಲಸಪದಗಳೆಂದು ತಿಳಿಯಬಹುದು.

ಈ ಎರಡು ಬಗೆಯ ಪದಗಳ ನಡುವೆ ಕೆಲವು ಅರಿದಾದ ವ್ಯತ್ಯಾಸಗಳಿವೆ: ತಿಳಿವುಪದಗಳಿಗೆ ಹೋಲಿಸಿದರೆ, ಕೆಲಸಪದಗಳ ಎಣಿಕೆ ತುಂಬಾ ಕಡಿಮೆ; ಇರುಹಪದವೆಂಬ ಗುಂಪಿನಲ್ಲಿ ಇರು ಎಂಬ ಒಂದು ಪದವಶ್ಟೇ ಇದೆ, ಮತ್ತು ಆಡುಪದಗಳ

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಗುಂಪಿನಲ್ಲಿ ನಾನು, ನೀನು ಮತ್ತು ತಾನು ಎಂಬ ಮೂರು ಪದಗಳಶ್ಟೇ ಇವೆ; ಇದಲ್ಲದೆ, ಈ ಕೆಲಸಪದಗುಂಪುಗಳು ಮುಚ್ಚಿದ ಗುಂಪುಗಳಾಗಿರುತ್ತವೆ; ತಿಳಿವುಪದಗುಂಪುಗಳ ಹಾಗೆ ಅವಕ್ಕೆ ಸಾಮಾನ್ಯವಾಗಿ ಹೊಸ ಪದಗಳನ್ನು ಸೇರಿಸಲು ಬರುವುದಿಲ್ಲ.

ತಿಳಿವುಪದಗಳಿಗಿಂತ ಕೆಲಸಪದಗಳು ಸೊಲ್ಲುಗಳಲ್ಲಿ ಹೆಚ್ಚು ಬಾರಿ ಬಳಕೆಯಾಗುತ್ತಿರುತ್ತವೆ ಎಂಬುದು ಈ ಎರಡು ಬಗೆಯ ಪದಗುಂಪುಗಳ ನಡುವಿರುವ ಇನ್ನೊಂದು ಬೇರ್ಮೆ. ಎತ್ತುಗೆಗಾಗಿ, ಒಂದು ಪಸುಗೆಯಲ್ಲಿ ಒಂದು, ಅದು, ಆ, ಮತ್ತು ಮೊದಲಾದ ಕೆಲಸಪದಗಳು ಮರ, ಗಿಡ, ಹೋಗು, ದೊಡ್ಡ ಮೊದಲಾದ ತಿಳಿವು ಪದಗಳಿಗಿಂತ ಎಶ್ಟೋ ಹೆಚ್ಚು ಬಾರಿ ಬಳಕೆಯಾಗಿರುವುದನ್ನು ಕಾಣಬಹುದು.

ಕೆಲವು ಕೆಲಸಪದಗಳನ್ನು ತಿರುಳುಪದಗಳಿಂದ ಪಡೆಯಲಾಗಿದೆ; ಎತ್ತುಗೆಗಾಗಿ, ಆಗು ಎಂಬ ಎಸಕಪದದಿಂದ ಆದರೆ ಎಂಬ ಸೇರಿಕೆಪದವನ್ನು ಮತ್ತು ಇಲ್ಲ ಎಂಬ ಎಸಕರೂಪದಿಂದ ಇಲ್ಲವೇ ಎಂಬ ಇನ್ನೊಂದು ಸೇರಿಕೆಪದವನ್ನು ಪಡೆಯಲಾಗಿದೆ. ಹಾಗಾಗಿ, ಕೆಲವು ಕೆಲಸಪದಗಳನ್ನು ಪದಗಳೆಂದು ಕರೆಯುವುದಕ್ಕಿಂತಲೂ ಪದರೂಪಗಳೆಂದು ಕರೆಯುವುದೇ ಸರಿಯೆಂದು ತೋರಬಹುದು; ಆದರೆ, ಸೊಲ್ಲುಗಳಲ್ಲಿ ಅವು ನಡೆಸುವ ಕೆಲಸವನ್ನವಲಂಬಿಸಿ ಅವನ್ನು ಈ ರೀತಿ ಬೇರೆ ಬೇರೆ ಪದಗುಂಪುಗಳಲ್ಲಿ ಇರಿಸಲು ಬರುತ್ತದೆ.

ಈ ಹಲವು ಬಗೆಯ ಪದಗಳ ಪರಿಚೆಯೆಂತಹದು, ಮತ್ತು ಅವು ಎಂತಹ ಬಳಕೆಗಳನ್ನು ತೋರಿಸುತ್ತವೆ ಎಂಬುದು ಮುಕ್ಯವಾಗಿ ಸೊಲ್ಲುಗಳಲ್ಲಿ ಅವು ನಡೆಸಬೇಕಾಗಿರುವ ಕೆಲಸಗಳು ಎಂತಹವು ಎಂಬುದನ್ನವಲಂಬಿಸಿರುತ್ತದೆ:

ಮೇಲೆ ವಿವರಿಸಿದ ಹಾಗೆ, ಎಸಕಪದಗಳು ಸೊಲ್ಲುಗಳಲ್ಲಿ ಒಂದು ಎಸಕವನ್ನು ತಿಳಿಸಬೇಕಾಗಿದೆ; ಹಾಗಾಗಿ, ಅವುಗಳೊಂದಿಗೆ ಎಸಕದ ಹೊತ್ತನ್ನು ತಿಳಿಸುವ ಒಟ್ಟುಗಳು, ಅಡಕವಾಗಿ ಅದರ ಆಗುಗ ಇಲ್ಲವೇ ಮಾಡುಗವನ್ನು ಗುರುತಿಸುವ ಒಟ್ಟುಗಳು, ಮತ್ತು ಆಡುಗನ ನಿಲುವನ್ನು ತಿಳಿಸುವ ಒಟ್ಟುಗಳು ಇಲ್ಲವೇ ನೆರವೆಸಕಪದಗಳು ಬರುತ್ತವೆ (೫ನೇ ಪಸುಗೆ ನೋಡಿ). ಇದಲ್ಲದೆ, ಅವು ಸೊಲ್ಲಿನ ತಿರುಳುಪದಗಳಾಗಿ ಬಳಕೆಯಾಗುತ್ತವೆ.

ಹೆಸರುಪದಗಳು ಎಸಕಗಳ ಪಾಂಗುಗಳನ್ನು ಗುರುತಿಸಬೇಕಾಗಿದೆ; ಹಾಗಾಗಿ, ಅಂತಹ ಪಾಂಗುಗಳ ಹಲವು ಪರಿಚೆಗಳನ್ನು ಅವು ಒಟ್ಟಾಗಿ ತಿಳಿಸಬೇಕಾಗುತ್ತದೆ; ಆದರೆ, ಈ ರೀತಿ ಪರಿಚೆಗಳನ್ನು ತಿಳಿಸುವುದಕ್ಕಿಂತಲೂ ಅವುಗಳ ಮೂಲಕ ಒಂದು ಪಾಂಗನ್ನು ಗುರುತಿಸುವುದೇ ಅವು ಮಾಡಬೇಕಾಗಿರುವ ಮುಕ್ಯ ಕೆಲಸವಾಗಿದೆ; ಈ ಕೆಲಸದಲ್ಲಿ ನೆರವಾಗುವಂತೆ ಅವು ಪರಿಚೆಪದ, ಎಣಿಕೆಪದ, ಗುರ್ತ ಮತ್ತು ಎಣಿಕೆಗಳ ಒಟ್ಟು, ಮೊದಲಾದುವನ್ನು ಪಡೆಯಬಲ್ಲುವು (೬ನೇ ಪಸುಗೆ ನೋಡಿ); ಇದಲ್ಲದೆ, ಅವು ಗುರುತಿಸುವ ಪಾಂಗುವಿಗೂ ಎಸಕಕ್ಕೂ ನಡುವಿರುವ ಪತ್ತುಗೆಯನ್ನು ತಿಳಿಸಲು ಅವು ಪತ್ತುಗೆ ಒಟ್ಟುಗಳೊಂದಿಗೂ ಬರಬಲ್ಲುವು (೭ನೇ ಪಸುಗೆ ನೋಡಿ).

ಪರಿಚೆಪದಗಳಿಗೆ ಪಾಂಗುಗಳ ಪರಿಚೆಯನ್ನು ತಿಳಿಸುವುದು, ಮತ್ತು ಎಸಕಗಳ ಪರಿಚೆಯನ್ನು ತಿಳಿಸುವುದು ಎಂಬುದಾಗಿ ಎರಡು ಬಗೆಯ ಮುಕ್ಯ ಕೆಲಸಗಳಿವೆ. ಇದಕ್ಕೆ ಹೊಂದಿಕೆಯಾಗುವಂತೆ, ಅವನ್ನು ನಡೆಸುವ ಪರಿಚೆಪದಗಳಲ್ಲೂ ಹೆಸರುಪರಿಚೆ ಮತ್ತು ಎಸಕಪರಿಚೆ ಎಂಬುದಾಗಿ ಎರಡು ಮುಕ್ಯ ಬಗೆಯವನ್ನು ಕಾಣಬಹುದು. ಪಾಂಗುಗಳು ಸಾಮಾನ್ಯವಾಗಿ ಹೆಚ್ಚು ಸಮಯ ಬಾಳುವಂತಹವುಗಳಾಗಿರುತ್ತವೆ, ಮತ್ತು ಎಸಕಗಳು ಬೇಗನೆ ಮಾರ್ಪಡುತ್ತಿರುವಂತಹವುಗಳಾಗಿರುತ್ತವೆ; ಹಾಗಾಗಿ, ಪರಿಚೆಪದಗಳು ತಿಳಿಸುವ ಪರಿಚೆಗಳಲ್ಲೂ ಬಾಳಿಕೆಯ ಪರಿಚೆಗಳು (ಹೆಸರುಪರಿಚೆಗಳು) ಮತ್ತು ಬಾಳಿಕೆಯಿಲ್ಲದ ಪರಿಚೆಗಳು (ಎಸಕಪರಿಚೆಗಳು) ಎಂಬುದಾಗಿ ಎರಡು ಬಗೆಯವಿರುತ್ತವೆ.

### ೧೧.೧.೪ ಹೆಚ್ಚಿನ ಕೆಲಸಗಳು

ಈ ಎರಡು ಬಗೆಯ ಪರಿಚೆಪದಗಳನ್ನೂ ಅವುಗಳ ಮುಕ್ಯ ಕೆಲಸದಲ್ಲಶ್ಟೇ ಅಲ್ಲದೆ ಬೇರೆ ಕೆಲಸಗಳಲ್ಲೂ ಬಳಸಲು ಬರುತ್ತದೆ; ಎತ್ತುಗೆಗಾಗಿ, ಹೆಸರುಪರಿಚೆಗಳನ್ನು ಹೆಸರುಕಂತೆಗಳಲ್ಲಿ ನೆರವು ಪದಗಳಾಗಿ ಬಳಸುವುದಶ್ಟೇ ಅಲ್ಲದೆ ಸೊಲ್ಲುಗಳ ತಿರುಳುಪದಗಳಾಗಿಯೂ ಬಳಸಲು ಬರುತ್ತದೆ; ಅವುಗಳಲ್ಲಿ ಕೆಲವನ್ನು ಅವು ತಿಳಿಸುವ ಪರಿಚೆಯನ್ನು ಒಂದು ಪಾಂಗಾಗಿ ಗುರುತಿಸಲು ಹೆಸರುಕಂತೆಗಳ ತಿರುಳುಪದಗಳಾಗಿಯೂ ಬಳಸಲು ಬರುತ್ತದೆ:

(೧ಕ) *ಅವಳು ಬಿಳಿ ಕೂದಲಿಗೆ ಬಣ್ಣ ಹಚ್ಚುತ್ತಿದ್ದಾಳೆ.*
(೧ಚ) *ಅವಳ ಕೂದಲು ಬಿಳಿ.*

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೧ಟ)  ಅವಳ ಕೂದಲಿನ ಉದ್ದ ಮೂರಡಿ.

(೧ಕ)ದಲ್ಲಿ ಬಿಳಿ ಎಂಬ ಹೆಸರುಪರಿಚೆಯನ್ನು ಬಿಳಿ ಕೂದಲು ಎಂಬ ಹೆಸರುಕಂತೆಯಲ್ಲಿ ನೆರವು ಪದವಾಗಿ ಬಳಸಲಾಗಿದೆ; ಅದನ್ನೇ (೧ಚ)ದಲ್ಲಿ ಆ ಸೊಲ್ಲಿನ ತಿರುಳುಪದವಾಗಿ ಬಳಸಲಾಗಿದೆ; ಇದಲ್ಲದೆ, (೧ಟ)ದಲ್ಲಿ ಉದ್ದ ಎಂಬ ಇನ್ನೊಂದು ಹೆಸರುಪರಿಚೆಯನ್ನು ಅವಳ ಕೂದಲಿನ ಉದ್ದ ಎಂಬ ಹೆಸರುಕಂತೆಯ ತಿರುಳುಪದವಾಗಿ ಬಳಸಲಾಗಿದೆ.

ಹೆಸರುಪರಿಚೆಗಳಿಗಿರುವ ಈ ಹೆಚ್ಚಿನ ಬಳಕೆಗಳಲ್ಲಿ ಅವು ಅವುಗಳದೇ ಆದ ಕೆಲವು ಪರಿಚೆಗಳನ್ನು ಕಳೆದುಕೊಳ್ಳುತ್ತವೆ, ಮತ್ತು ಅವುಗಳದಲ್ಲದ ಕೆಲವು ಹೆಚ್ಚಿನ ಪರಿಚೆಗಳನ್ನು ಪಡೆದುಕೊಳ್ಳುತ್ತವೆ. ಎತ್ತುಗೆಗಾಗಿ, ಹೆಸರುಕಂತೆಯ ನೆರವುಪದಗಳಾಗಿ ಬರುವ ಹೆಸರುಪರಿಚೆಗಳು ಹಂತಪದಗಳೊಂದಿಗೆ ಬರಬಲ್ಲುವು (ತುಂಬಾ ಉದ್ದ ಕೂದಲು); ಆದರೆ, ಹೆಸರುಕಂತೆಗಳ ತಿರುಳುಪದಗಳಾಗಿ ಬರುವ ಹೆಸರುಪರಿಚೆಗಳು ಅಂತಹ ಪದಗಳೊಂದಿಗೆ ಬರಲಾರವು (*ಕೂದಲಿನ ತುಂಬಾ ಉದ್ದ ನಾಲ್ಕಡಿ). ಈ ಹೆಚ್ಚಿನ ಬಳಕೆಯಲ್ಲಿ ಅವು ಹಂತಪದಗಳೊಂದಿಗೆ ಬರುವ ತಮ್ಮ ಪರಿಚೆಯನ್ನು ಕಳೆದುಕೊಳ್ಳುತ್ತವೆ.

ಇದಲ್ಲದೆ, ಹೆಸರುಕಂತೆಯ ನೆರವುಪದಗಳಾಗಿ ಬರುವ ಹೆಸರುಪರಿಚೆಗಳು ಎಸಕಪತ್ತುಗೆಯ ಒಟ್ಟುಗಳೊಂದಿಗೆ ಬರಲಾರವು; ಆದರೆ, ಹೆಸರುಕಂತೆಯ ತಿರುಳುಪದಗಳಾಗಿ ಬಂದಾಗ ಅವಕ್ಕೆ ಇಂತಹ ಒಟ್ಟುಗಳನ್ನು ಸೇರಿಸಲು ಬರುತ್ತದೆ:

(೨ಕ)  *ಅವಳು ಬಿಳಿಗೆ ಕೂದಲಿಗೆ ಬಣ್ಣ ಹಚ್ಚುತ್ತಿದ್ದಾಳೆ.
(೨ಚ)  ಅವಳು ಕೂದಲಿನ ಉದ್ದವನ್ನು ಕಡಿಮೆ ಮಾಡಿದ್ದಾಳೆ.

ಬಿಳಿ ಕೂದಲು ಎಂಬ ಹೆಸರುಕಂತೆಯಲ್ಲಿ ನೆರವುಪದವಾಗಿ ಬಂದಿರುವ ಬಿಳಿ ಎಂಬುದಕ್ಕೆ ಗೆ ಎಂಬ ಎಸಕಪತ್ತುಗೆಯ ಒಟ್ಟನ್ನು ಸೇರಿಸಿರುವ (೨ಕ) ಸೊಲ್ಲು ಸರಿಯಿಲ್ಲ; ಆದರೆ, ಕೂದಲಿನ ಉದ್ದ ಎಂಬ ಹೆಸರುಕಂತೆಯ ತಿರುಳುಪದವಾಗಿ ಬಂದಿರುವ ಉದ್ದ ಎಂಬ ಹೆಸರುಪರಿಚೆಗೆ ಅನ್ನು ಎಂಬ ಎಸಕಪತ್ತುಗೆಯ ಒಟ್ಟನ್ನು ಸೇರಿಸಿರುವ (೨ಚ) ಸೊಲ್ಲು ಸರಿಯಾಗಿದೆ.

ಎಸಕಪರಿಚೆಗಳನ್ನೂ ಅವುಗಳ ಮುಕ್ಯ ಕೆಲಸದಲ್ಲಶ್ಟೇ ಅಲ್ಲದೆ ಬೇರೆಯೂ ಕೆಲವು ಹೆಚ್ಚಿನ ಕೆಲಸಗಳಲ್ಲಿ ಬಳಸಲು ಬರುತ್ತದೆ, ಮತ್ತು ಇಂತಹ ಹೆಚ್ಚಿನ ಕೆಲಸಗಳಲ್ಲಿ ಬಳಸಿದಾಗ ಅವು ತಮ್ಮವೇ ಆದ ಕೆಲವು ಪರಿಚೆಗಳನ್ನು ಕಳೆದುಕೊಳ್ಳುತ್ತವೆ ಮತ್ತು ಕೆಲವು ಹೆಚ್ಚಿನ ಪರಿಚೆಗಳನ್ನು ಪಡೆದುಕೊಳ್ಳುತ್ತವೆ; ಈ ಹೆಚ್ಚಿನ ಪರಿಚೆಗಳು ಅವು ನಡೆಸಬೇಕಿರುವ ಹೆಚ್ಚಿನ ಕೆಲಸಗಳಿಗೆ ಬೇಕಾದುವಾಗಿರುತ್ತವೆ ಎಂಬುದನ್ನು ಗಮನಿಸಬಹುದು (೧೧.೮.೮–೯ ನೋಡಿ).

# ೧೧.೨ ಪರಿಚೆಪದಗಳ ಇಟ್ಟಳ

ಪರಿಚೆಪದಗಳ ಇಟ್ಟಳದ ಕುರಿತಾಗಿ ಹಲವು ವಿವರಗಳನ್ನು ೩.೮ರಲ್ಲಿ ಕೊಡಲಾಗಿದೆ; ಈ ಇಟ್ಟಳಗಳು ಹೆಸರುಕಂತೆಗಳಲ್ಲಿ ಇಲ್ಲವೇ ಸೊಲ್ಲುಗಳಲ್ಲಿ ಅವುಗಳಿಗಿರುವ ಬಳಕೆಯ ಮೇಲೆ ಯಾವ ರೀತಿಯಲ್ಲಿ ಕಟ್ಟುಪಾಡುಗಳನ್ನು ಹೊರಿಸುತ್ತವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಪರಿಚೆಪದಗಳಲ್ಲಿ ಹೆಸರುಪರಿಚೆ ಮತ್ತು ಎಸಕಪರಿಚೆಗಳೆಂಬ ಎರಡು ಮುಕ್ಯ ಒಳಗುಂಪುಗಳಿವೆಯೆಂಬುದನ್ನು ಮೇಲೆ ೧೧.೧ರಲ್ಲಿ ವಿವರಿಸಲಾಗಿದೆ; ಈ ಎರಡು ಒಳಗುಂಪುಗಳಲ್ಲಿ ಬರುವ ಪದಗಳು ಅವುಗಳ ಇಟ್ಟಳದಲ್ಲೂ ಬೇರಾಗಿವೆ. ಕೆಲವು ಪದಗಳು ಈ ಎರಡು ಗುಂಪುಗಳಲ್ಲೂ ಬರಬಲ್ಲುವು; ಆದರೆ, ಹೆಚ್ಚಿನವನ್ನೂ ಇನ್ನೊಂದು ಗುಂಪಿನಲ್ಲಿ ಸೇರಿಸಲು ಅವಕ್ಕೆ ಕೆಲವು ಒಟ್ಟುಗಳನ್ನು ಸೇರಿಸಬೇಕಾಗುತ್ತದೆ.

ಎತ್ತುಗೆಗಾಗಿ, ಬಿಳಿ ಹೆಸರುಪರಿಚೆಯನ್ನು ಎಸಕಪರಿಚೆಯಾಗಿ ಮಾಡಲು ಅದಕ್ಕೆ ಅಗೆ ಎಂಬ ಒಟ್ಟನ್ನು ಸೇರಿಸಬೇಕಾಗುತ್ತದೆ, ಮತ್ತು ನೆಟ್ಟಗೆ ಎಂಬ ಎಸಕಪರಿಚೆಯನ್ನು ಹೆಸರುಪರಿಚೆಯಾಗಿ ಮಾಡಲು ಅದಕ್ಕೆ ಅ ಒಟ್ಟನ್ನು ಸೇರಿಸಬೇಕಾಗುತ್ತದೆ.

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೧ಕ) ಬಿಳಿ ಗೋಡೆಯಾಗಿದ್ದುದು ಈಗ ಕಪ್ಪು ಗೋಡೆಯಾಗಿದೆ. (೧ಚ) ಕಪ್ಪು ಗೋಡೆಯಾಗಿದ್ದುದನ್ನು ಬೆಳ್ಳಗೆ ತೊಳೆದಿದ್ದಾರೆ.

(೨ಕ) ನೀವು ಈ ದಾರಿಯಲ್ಲೇ ನೆಟ್ಟಗೆ ಹೋಗಬೇಕು.

(೨ಚ) ಈ ನೆಟ್ಟಗಿನ ದಾರಿ ಎಲ್ಲಿಗೆ ಹೋಗುತ್ತದೆ?

(೧ಚ)ದಲ್ಲಿ ಬಿಳಿ ಎಂಬ ಹೆಸರುಪರಿಚೆಯನ್ನು ಎಸಕಪರಿಚೆಯಾಗಿ ಬಳಸಲು ಅದನ್ನು ಬೆಳ್ಳಗೆ ಎಂಬುದಾಗಿ ಮಾರ್ಪಡಿಸಲಾಗಿದೆ, ಮತ್ತು (೨ಚ)ದಲ್ಲಿ ನೆಟ್ಟಗೆ ಎಂಬ ಎಸಕಪರಿಚೆಯನ್ನು ಹೆಸರುಪರಿಚೆಯಾಗಿ ಬಳಸಲು ಅದನ್ನು ನೆಟ್ಟಗಿನ ಎಂಬುದಾಗಿ ಮಾರ್ಪಡಿಸಲಾಗಿದೆ.

ಆದರೆ, ನೇರ ಎಂಬ ಪರಿಚೆಪದವನ್ನು ಅದರಲ್ಲಿ ಯಾವ ಮಾರ್ಪಾಡನ್ನೂ ಮಾಡದೆ ಹೆಸರುಪರಿಚೆಯಾಗಿ, ಇಲ್ಲವೇ ಎಸಕಪರಿಚೆಯಾಗಿ ಬಳಸಲು ಬರುತ್ತದೆ ಎಂಬುದನ್ನು ಕೆಳಗೆ ಕೊಟ್ಟಿರುವ ಸೊಲ್ಲುಗಳಲ್ಲಿ ಕಾಣಬಹುದು:

(೩ಕ) ಅವನು ಯಾವಾಗಲೂ ನೇರ ದಾರಿಯಲ್ಲಿ ಹೋಗುತ್ತಾನೆ.

(೩ಚ) ಅವನು ಆ ದಾರಿಯಲ್ಲೇ ನೇರ ಹೋಗುತ್ತಿದ್ದ.

### ೧೧.೨.೧ ಪರಿಚೆಬೇರುಗಳ ಬಳಕೆ

ಕನ್ನಡದಲ್ಲಿ ಹೆಚ್ಚುಕಡಿಮೆ ಮೂವತ್ತು ಪರಿಚೆಬೇರುಗಳಿದ್ದು, ಇವುಗಳಲ್ಲಿ ಒಳ್, ಒಡ, ಕೀೞ್, ನಟ್, ಮುನ್, ಹಿನ್, ಮಾರ್ ಮತ್ತು ಮೇಲ್ ಎಂಬ ಎಂಟು ಬೇರುಗಳನ್ನು ಎಸಕಪರಿಚೆ ಬೇರುಗಳೆಂದು ಮತ್ತು ಕಿರ್, ನಲ್, ನುಣ್, ಬೆಳ್, ಎಳ್, ಕೆನ್, ಹೇರ್, ನಿಡು, ಕರ್, ಕೇಸ್, ಪಚ್, ಸೀ, ಈನ್, ಕಯ್, ಕಸು, ಕಮ್, ಚೆನ್, ಸಯ್, ಬಿಣ್, ಕಿರ್, ಒಳ್, ಮುತ್ ಎಂಬಂತಹ ಉಳಿದ (ಹೆಚ್ಚುಕಡಿಮೆ ಇಪ್ಪತ್ತು) ಬೇರುಗಳನ್ನು ಹೆಸರುಪರಿಚೆ ಬೇರುಗಳೆಂದು ತಿಳಿಯಬಹುದು.

ಇವುಗಳಲ್ಲಿ ಎಸಕಪರಿಚೆಯ ಬೇರುಗಳನ್ನು ಜೋಡುಪದ ಮತ್ತು ಕೂಡುಪದಗಳೆಂಬ ಎರಡು ಬಗೆಯ ಪದಗಳನ್ನು ಉಂಟುಮಾಡುವಲ್ಲೂ ಬಳಸಲಾಗುತ್ತದೆ; ಆದರೆ, ಹೆಸರುಪರಿಚೆಯ ಬೇರುಗಳನ್ನು ಮುಕ್ಯವಾಗಿ ಜೋಡುಪದಗಳನ್ನು ಉಂಟುಮಾಡುವಲ್ಲಿ ಬಳಸಲಾಗುತ್ತದೆ.

ಎತ್ತುಗೆಗಾಗಿ, ಹಿನ್ ಎಸಕಪರಿಚೆ ಬೇರಿನಿಂದ ಹಿಂಗಡೆ, ಹಿನ್ನೆಲೆ, ಹಿಮ್ಮೇಳ, ಹಿಂಗಾಲು, ಹಿನ್ನೀರು ಮೊದಲಾದ ಜೋಡುಪದಗಳನ್ನು (೨.೫.೫ ನೋಡಿ), ಮತ್ತು ಹಿಂಜರಿ, ಹಿಂತೆಗೆ, ಹಿಂಬಾಲಿಸು, ಹಿಮ್ಮೆಟ್ಟು ಮೊದಲಾದ ಕೂಡುಪದಗಳನ್ನು (೩.೩.೧(೨) ನೋಡಿ) ಉಂಟುಮಾಡಲಾಗಿದೆ.

ಇದಕ್ಕೆ ಬದಲು, ಕಿರು/ಕಿತ್ ಹೆಸರುಪರಿಚೆ ಬೇರಿನಿಂದ ಕಿರುದೆರೆ, ಕಿರುಗತ್ತಿ, ಕಿತ್ತೋಲೆ, ಕಿತ್ತೆಸಳು ಎಂಬಂತಹ ಜೋಡುಪದಗಳನ್ನು ಉಂಟುಮಾಡಲಾಗಿದೆಯಲ್ಲದೆ, ಕೂಡುಪದಗಳನ್ನು ಉಂಟುಮಾಡಿರುವ ಹಾಗೆ ಕಾಣಿಸುವುದಿಲ್ಲ.

ಇದಲ್ಲದೆ, ಕೆಲವು ಹೆಸರುಪದಗಳನ್ನು ಮತ್ತು ಎಸಕಪದಗಳನ್ನು ಉಂಟುಮಾಡುವಲ್ಲೂ ಈ ಪರಿಚೆಬೇರುಗಳನ್ನು ಬಳಸಲಾಗಿದೆ. ಎತ್ತುಗೆಗಾಗಿ, ನುಣ್ ಪರಿಚೆಬೇರಿನಿಂದ ನುಣುಪು ಹೆಸರುಪದವನ್ನು, ಮತ್ತು ಹಿನ್ ಪರಿಚೆಬೇರಿನಿಂದ ಹಿಂಚು ಎಸಕಪದವನ್ನು ಉಂಟುಮಾಡಲಾಗಿದೆ (೨.೪.೩ ಮತ್ತು ೩.೨.೩ ನೋಡಿ).

ಪರಿಚೆಬೇರುಗಳಿಗೆ ಕೆಲವು ಒಟ್ಟುಗಳನ್ನು ಸೇರಿಸಿ ಹೆಸರುಪರಿಚೆ ಮತ್ತು ಎಸಕಪರಿಚೆಗಳನ್ನೂ ಪಡೆಯಲಾಗುತ್ತದೆ. ಎತ್ತುಗೆಗಾಗಿ, ನಲ್ ಬೇರಿಗೆ ಅ ಒಟ್ಟನ್ನು ಸೇರಿಸಿ ನಲ್ಲ ಎಂಬ ಹೆಸರುಪರಿಚೆಯನ್ನು, ಬೆಳ್ ಬೇರಿಗೆ ಇ ಒಟ್ಟನ್ನು ಸೇರಿಸಿ ಬಿಳಿ ಎಂಬ ಹೆಸರುಪರಿಚೆಯನ್ನು, ಮತ್ತು ನುಣ್ ಬೇರಿಗೆ ಅಗೆ ಒಟ್ಟನ್ನು ಸೇರಿಸಿ ನುಣ್ಣಗೆ ಎಂಬ ಎಸಕಪರಿಚೆಯನ್ನು ಪಡೆಯಲಾಗಿದೆ (ವಿವರಗಳಿಗೆ ೩.೪ ನೋಡಿ).

### ೧೧.೨.೨ ಅಣಕಬೇರುಗಳ ಬಳಕೆ

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಹಲವು ಬಗೆಯ ಅಣಕಬೇರುಗಳನ್ನೂ ಈ ರೀತಿ ಹೆಸರುಪದ, ಎಸಕಪದ, ಮತ್ತು ಪರಿಚೆಪದಗಳನ್ನು ಉಂಟುಮಾಡುವಲ್ಲಿ ಬಳಸಲಾಗುತ್ತದೆ; ಎತ್ತುಗೆಗಾಗಿ, ಗರಗಸ, ಗಡಿಬಿಡಿ, ಗಿರಿಗಿಟಿ, ಪಿರಿಪಿರಿ, ಕಸಿಮಿಸಿ, ದಬದಬೆ ಎಂಬಂತಹ ಹೆಸರುಪದಗಳಲ್ಲಿ ಅಣಕಬೇರುಗಳು ಬಳಕೆಯಾಗಿರುವುದನ್ನು ಕಾಣಬಹುದು.

ಇದಲ್ಲದೆ, ಕಾಕಾ ಎನ್ನುವ ಕಾಗೆ, ಗೂಗೂ ಎನ್ನುವ ಗೂಬೆ, ಗೋಂಗೋಂ ಎನ್ನುವ ಗೋಂಕುರು ಕಪ್ಪೆ, ಗಿರ್‌ಗಿರ್ ಎನ್ನುವ ಗಿರಿಕಿ ಮೆಟ್ಟು, ಮಿಣಮಿಣನೆ ಮಿಣುಗುಟ್ಟುವ ಮಿಣುಕು ಹುಳ, ಜೋಜೋ ಎನ್ನುವ ಜೋಗುಳ, ತಟತಟನೆ ಮಳೆ ಸುರಿಯುವಾಗ ಬೀಳುವ ನೀರಿನ ತಟಕುಗಳು, ಗುಟುಗುಟನೆ ಕುಡಿಯುವಲ್ಲಿ ತೆಗೆದುಕೊಳ್ಳುವ ಗುಟುಕುಗಳು, ಗೋಳೋ ಎಂದು ಅಳಬೇಕಾಗುವ ಗೋಳು ಎಂಬಂತಹ ಕೊಗೆತಗಳೂ ಕಾಗೆ, ಗೂಬೆ, ಗೋಂಕುರು ಕಪ್ಪೆ, ಗಿರಕಿ ಮೆಟ್ಟು ಮೊದಲಾದ ಹೆಸರುಪದಗಳನ್ನು ಉಂಟುಮಾಡುವಲ್ಲಿ ಅಣಕಬೇರುಗಳು ಬಳಕೆಯಾಗಿರುವುದನ್ನು ತೋರಿಸುತ್ತವೆ.

ಅಣಕಬೇರುಗಳನ್ನು ಇಲ್ಲವೇ ಪದಗಳನ್ನು ಬಳಸಿ ಎಸಕಪದಗಳನ್ನು ಉಂಟುಮಾಡುವಲ್ಲಿ ಮುಕ್ಯವಾಗಿ ಇಸು ಒಟ್ಟನ್ನು ಬಳಸಲಾಗುತ್ತದೆ; ಮೇಲೆ (೩.೨.೩)ರಲ್ಲಿ ತಿಳಿಸಿದ ಹಾಗೆ, ತುಸು ಹೊತ್ತು ನಡೆಯುವ ಸದ್ದು, ಅನಿಸಿಕೆ ಮೊದಲಾದುವನ್ನು ತಿಳಿಸುವ ಗಮಗಮ, ಗಣಗಣ, ತಳತಳ ಎಂಬಂತಹ ಹಲವು ಅಣಕಪದಗಳಿಗೆ ಇಸು ಒಟ್ಟನ್ನು ಸೇರಿಸಿ ಗಮಗಮಿಸು, ಗಣಗಣಿಸು, ತಳತಳಿಸು ಎಂಬಂತಹ ಎಸಕಪದಗಳನ್ನು ಉಂಟುಮಾಡಲಾಗಿದೆ.

ಇದಲ್ಲದೆ, ಕೆಲವು ಅಣಕಬೇರುಗಳಿಗೆ ಇಸು ಒಟ್ಟಿನೊಂದಿಗೆ ಕರ್ ಇಲ್ಲವೇ ಅರ್ ಒಟ್ಟನ್ನು ಸೇರಿಸಿಯೂ ಕಟಕರಿಸು, ಕುಕ್ಕರಿಸು, ಕೇಕರಿಸು, ಚಕ್ಕರಿಸು, ಚಪ್ಪರಿಸು ಮೊದಲಾದ ಕೆಲವು ಎಸಕಪದಗಳನ್ನು ಉಂಟುಮಾಡಲಾಗಿದೆ, ಮತ್ತು ಇಸು ಒಟ್ಟಿನ ಬದಲು ಕುಟ್ಟು (ಗುಟ್ಟು) ಎಂಬುದನ್ನು ಸೇರಿಸಿಯೂ ಪಿಸುಗುಟ್ಟು, ಲೊಚಗುಟ್ಟು, ಬುಸುಗುಟ್ಟು, ಗಿಜಿಗುಟ್ಟು ಮೊದಲಾದ ಬೇರೆ ಕೆಲವು ಎಸಕಪದಗಳನ್ನು ಉಂಟುಮಾಡಲಾಗಿದೆ. ಗೋಗರೆ, ದುಮ್ಮಿಕ್ಕು, ಗೊಣಗು, ಮಿರುಗು, ಮಿನುಗು ಮೊದಲಾದ ಬೇರೆ ಕೆಲವು ಎಸಕಪದಗಳ ಉಂಟುಮಾಡುವಿಕೆಯಲ್ಲೂ ಅಣಕಬೇರುಗಳ ಬಳಕೆಯಾಗಿದೆಯೆಂದು ಹೇಳಲು ಬರುತ್ತದೆ.

ಅಣಕಬೇರುಗಳಿಂದ ಕೆಲವು ಹೆಸರುಪರಿಚೆಗಳನ್ನೂ ಉಂಟುಮಾಡಲಾಗಿದೆ; ಮಿಳಿಮಿಳಿ ಕಣ್ಣು, ಚಳಚಳ ಬಿಸಿಲು, ಜಿಟಿಜಿಟಿ ಮಳೆ, ಬಡಬಡ ಮಾತು, ಸುರುಸುರು ಬತ್ತಿ, ಗೀಗೀ ಪದ ಎಂಬಂತಹ ಬಳಕೆಗಳನ್ನು ಇದಕ್ಕೆ ಎತ್ತುಗೆಗಳನ್ನಾಗಿ ಕೊಡಬಹುದು. ಆದರೆ, ಇಂತಹ ಹೆಸರುಪರಿಚೆಗಳು ಹೆಚ್ಚಿಲ್ಲ.

ಅಣಕಬೇರುಗಳನ್ನು ಬಳಸಿ ಹಲವು ಬಗೆಯ ಎಸಕಪರಿಚೆಗಳನ್ನು ಉಂಟುಮಾಡಲಾಗಿದೆ. ಇವುಗಳಲ್ಲಿ ತುಸು ಹೊತ್ತು ನಡೆಯುವ ಎಸಕಗಳ ಪರಿಚೆಯನ್ನು ತಿಳಿಸುವಂತಹ ಎಸಕಪರಿಚೆಗಳಿಗೂ ಒಮ್ಮೆಗೇ ನಡೆದುಹೋಗುವ ಎಸಕಗಳ ಪರಿಚೆಯನ್ನು ತಿಳಿಸುವಂತಹ ಎಸಕಪರಿಚೆಗಳಿಗೂ ನಡುವೆ ಅವುಗಳ ಇಟ್ಟಳದಲ್ಲಿ ಬೇರ್ಮೆಯಿದೆ; ಇವುಗಳ ಕುರಿತಾಗಿ ಕೆಲವು ವಿವರಗಳನ್ನು (೩.೪.೫)ರಲ್ಲಿ ಕೊಡಲಾಗಿದೆ.

ತುಸು ಹೊತ್ತು ನಡೆಯುವಂತಹ ಎಸಕಗಳ ಪರಿಚೆಯನ್ನು ತಿಳಿಸುವ ಎಸಕಪರಿಚೆಗಳಲ್ಲಿ ಅಣಕಬೇರುಗಳು ಇಮ್ಮಡಿ ರೂಪದಲ್ಲಿ ಬರುತ್ತವೆ, ಮತ್ತು ಅವುಗಳ ಇಟ್ಟಳದಲ್ಲಿ ಸಾಮಾನ್ಯವಾಗಿ ಒತ್ತುಬರಿಗೆ ಇಲ್ಲವೇ ಉದ್ದ ತೆರೆಯುಲಿ ಬರುವುದಿಲ್ಲ; ಇದಕ್ಕೆ ಬದಲು, ಒಮ್ಮೆಗೇ ನಡೆದುಹೋಗುವಂತಹ ಎಸಕಗಳ ಪರಿಚೆಯನ್ನು ತಿಳಿಸುವ ಎಸಕಪರಿಚೆಗಳಲ್ಲಿ ಅಣಕಬೇರುಗಳು ಒತ್ತೆರೂಪದಲ್ಲಿ ಬರುತ್ತವೆ, ಮತ್ತು ಅವುಗಳ ಇಟ್ಟಳದಲ್ಲಿ ಒಂದು ಒತ್ತುಬರಿಗೆ ಇಲ್ಲವೇ ಉದ್ದ ತೆರೆಯುಲಿ ಬರುತ್ತದೆ. ಈ ಎರಡು ಬಗೆಯ ಎಸಕಪರಿಚೆಗಳ ನಡುವಿರುವ ಈ ಬೇರ್ಮೆಯನ್ನು ಕೆಳಗೆ ಕೊಟ್ಟಿರುವ ಎತ್ತುಗೆಗಳಲ್ಲಿ ಕಾಣಬಹುದು:

| ತುಸು ಹೊತ್ತು ನಡೆಯುವವು | ಒಮ್ಮೆಗೇ ನಡೆದುಹೋಗುವವು |
|---|---|
| ಕಚಕಚನೆ ಅಗಿದ | ಕಚ್ಚನೆ/ಕಚಕ್ಕನೆ ಕಡಿದ |
| ಗರಗರನೆ ತಿರುಗಿತು | ಗರ್‍ರನೆ ತಿರುಗಿತು |
| ಗಿರಗಿರನೆ ತಿರುಗಿತು | ಗಿರ್‍ರನೆ ತಿರುಗಿತು |
| ಚರಚರನೆ ಕತ್ತರಿಸಿದ | ಚರ್‍ರನೆ/ಚರಕ್ಕನೆ ಹರಿಯಿತು |
| ಚಟಚಟನೆ ಮುರಿಯಿತು | ಚಟ್ಟನೆ/ಚಟಕ್ಕನೆ ಮುರಿಯಿತು |
| ಜುಮುಜುಮು ಎನ್ನುತ್ತಿದೆ | ಜುಮ್ಮೆಂದಿತು |

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

| | |
|---|---|
| ಟಣಟಣನೆ ಬಾರಿಸಿತು | ಟಣ್ಣೆಂದು/ಟಣಕ್ಕೆಂದು ಬಿತ್ತು |
| ತಟತಟನೆ ಮಳೆ ಸುರಿಯಿತು | ತಟ್ಟನೆ/ತಟಕ್ಕನೆ/ತಟಾರನೆ ಮೇಲೆದ್ದ |
| ತಳತಳನೆ ಹೊಳೆಯುತ್ತಿತ್ತು | ತಳಕ್ಕನೆ ಹೊಳೆಯಿತು |
| ದಬದಬನೆ ಬೀಳುತ್ತಿತ್ತು | ದಬ್ಬನೆ ಕೆಳಗೆ ಬಿತ್ತು |
| ದಿಗದಿಗನೆ ಕುಣಿದ | ದಿಗ್ಗನೆ ಮೇಲೆದ್ದ |
| ನಡನಡನೆ ನಡುಗಿದ | ನಟಕ್ಕನೆ ತುಂಡಾಯಿತು |
| ಫಕಫಕನೆ ನಗುತ್ತಿದ್ದ | ಫಕ್ಕನೆ ನಕ್ಕ |
| ಫಟಫಟನೆ ಬೀಳುತ್ತಿತ್ತು | ಫಟ್ಟನೆ/ಫಟೀರನೆ ಕೆಳಗೆ ಬಿತ್ತು |
| ಫಳಫಳನೆ ಹೊಳೆಯುತ್ತಿತ್ತು | ಫಳಕ್ಕನೆ ಹೊಳೆಯಿತು |
| ಬಗಬಗನೆ ಉರಿಯುತ್ತಿತ್ತು | ಬಗ್ಗನೆ ಬೆಂಕಿ ಹೊತ್ತಿಕೊಂಡಿತು |
| ಬಳಬಳನೆ ಕಾರಿದ | ಬಳಕ್ಕನೆ ಕಾರಿದ |

ಒಮ್ಮೆಗೇ ನಡೆದುಹೋಗುವಂತಹ ಎಸಕಗಳ ಪರಿಚೆಯನ್ನು ತಿಳಿಸುವ ಎಸಕಪರಿಚೆಗಳು ಸಾಮಾನ್ಯವಾಗಿ ಅನೆ ಒಟ್ಟಿನೊಂದಿಗೆ ಬರುತ್ತವೆ; ಅನ್ನು, ಇಲ್ಲವೇ ಎಂದು ಎಂಬುದರೊಂದಿಗೂ ಅವನ್ನು ಬಳಸಲು ಬರುತ್ತದೆ; ಆದರೆ, ಈ ಎರಡು ಬಗೆಯ ನುಡಿತಗಳ ನೆರವಿಲ್ಲದೆ ಅವು ನೇರವಾಗಿ ಎಸಕಪದಗಳೊಂದಿಗೆ ಬಳಕೆಯಾಗುವುದಿಲ್ಲ. ಇದಕ್ಕೆ ಬದಲು, ತುಸು ಹೊತ್ತು ನಡೆಯುವಂತಹ ಎಸಕಗಳ ಪರಿಚೆಯನ್ನು ತಿಳಿಸುವ ಎಸಕಪರಿಚೆಗಳು ನೇರವಾಗಿಯೂ ಎಸಕಪದಗಳೊಂದಿಗೆ ಬರಬಲ್ಲುವು:

| <u>ಅನೆ ಒಟ್ಟಿನೊಂದಿಗೆ</u> | <u>ನೇರವಾಗಿ</u> |
|---|---|
| ಗಡಗಡನೆ ನಡುಗು | ಗಡಗಡ ನಡುಗು |
| ಗರಗರನೆ ತಿರುಗು | ಗರಗರ ತಿರುಗು |
| ಗಸಗಸನೆ ತಿಕ್ಕು | ಗಸಗಸ ತಿಕ್ಕು |
| ಚರಚರನೆ ಕತ್ತರಿಸು | ಚರಚರ ಕತ್ತರಿಸು |
| ತಕತಕನೆ ಕುಣಿ | ತಕತಕ ಕುಣಿ |
| ತಳತಳನೆ ಕುದಿ | ತಳತಳ ಕುದಿ |
| ದಳದಳನೆ ಎಳೆ | ದಳದಳ ಎಳೆ |

ಅಣಕಬೇರುಗಳನ್ನು ಬಳಸಿರುವ ಎಸಕಪರಿಚೆಗಳಿಗೂ ಬೇರೆ ಪರಿಚೆಬೇರುಗಳನ್ನು ಬಳಸಿರುವ ಎಸಕಪರಿಚೆಗಳಿಗೂ ನಡುವೆ ಒಂದು ಮುಕ್ಯವಾದ ವ್ಯತ್ಯಾಸವಿದೆ: ಅಣಕಬೇರುಗಳನ್ನು ಬಳಸಿರುವಲ್ಲಿ ಅನೆ ಒಟ್ಟು ಬರುತ್ತದಲ್ಲದೆ ಅಗೆ ಒಟ್ಟು ಬರುವುದಿಲ್ಲ. ಆದರೆ, ಬೇರೆ ಪರಿಚೆಬೇರುಗಳನ್ನು ಬಳಸಿರುವಲ್ಲಿ ಈ ಎರಡು ಒಟ್ಟುಗಳೂ ಬರಬಲ್ಲುವು.

ಎತ್ತುಗೆಗಾಗಿ, ನುಣ್ಣಗೆ-ನುಣ್ಣನೆ, ಕಮ್ಮಗೆ-ಕಮ್ಮನೆ, ಮೆತ್ತಗೆ-ಮೆತ್ತನೆ, ಮೆಲ್ಲಗೆ-ಮೆಲ್ಲನೆ ಎಂಬಂತಹ ಎಸಕಪರಿಚೆಗಳಲ್ಲಿ ಈ ಎರಡು ಒಟ್ಟುಗಳೂ ಬಳಕೆಯಾಗಿವೆ; ಇದಕ್ಕೆ ಬದಲು, ಗಪ್ಪನೆ, ಚಕ್ಕನೆ, ಜಗ್ಗನೆ, ದಿಗ್ಗನೆ, ಸರ್‍ರನೆ ಎಂಬಂತಹ ಅಣಕಬೇರುಗಳಿರುವ ಅಂತಹವೇ ಪದಗಳಲ್ಲಿ, ಇಲ್ಲವೇ ದಬದಬನೆ, ತಳತಳನೆ, ಫಟಕ್ಕನೆ ಎಂಬಂತಹ ಬೇರೆ ಬಗೆಯ ಪದಗಳಲ್ಲಿ ಅಗೆ ಒಟ್ಟನ್ನು ಬಳಸಲು ಬರುವುದಿಲ್ಲ.

ಅನೆ ಒಟ್ಟನ್ನು ಅನ್ನು ಎಂಬ ಎಸಕಪದದಿಂದ, ಮತ್ತು ಅಗೆ ಒಟ್ಟನ್ನು ಆಗು ಎಂಬ ಎಸಕಪದದಿಂದ ಪಡೆದಿರುವ ಹಾಗೆ ಕಾಣಿಸುತ್ತದೆ; ಅಣಕಬೇರುಗಳನ್ನು ಬಳಸಿರುವಲ್ಲೆಲ್ಲ ಮುಕ್ಯವಾಗಿ ಒಂದು ಎಸಕ ನಡೆಯುವಾಗ ಉಂಟಾಗುವ ಉಲಿಯನ್ನು ಅಣಕಿಸಲಾಗುತ್ತದೆ; ಹಾಗಾಗಿ, ಅಂತಹ ಕಡೆಗಳಲ್ಲಿ ಆಗು ಎಂಬುದಕ್ಕಿಂತಲೂ ಅನ್ನು ಎಂಬುದರ ಬಳಕೆಯೇ ಕಾಣಿಸಿಕೊಳ್ಳುತ್ತದೆ.

ಹೆಚ್ಚಿನ ಅಣಕಪದಗಳೂ ಮುಚ್ಚುಲಿಯಲ್ಲಿ ಮೊದಲಾಗುತ್ತವೆ; ಒಮ್ಮೆಗೇ ನಡೆದುಹೋಗುವಂತಹ ಎಸಕಗಳ ಪರಿಚೆಯನ್ನು ತಿಳಿಸುವ ಅಬಕ್ಕನೆ, ಅಳ್ಳನೆ, ಒಯ್ಯನೆ ಎಂಬಂತಹ ಕೆಲವೇ ಕೆಲವು ಪರಿಚೆಪದಗಳಶ್ಟೇ ತೆರೆಯುಲಿಯಲ್ಲಿ ಮೊದಲಾಗುತ್ತವೆ.

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

## ೧೧.೨.೩ ಎಸಕಪದಗಳಿಂದ ಪಡೆದ ಪರಿಚೆಪದಗಳು

(ಕ) ಎಸಕಪದಗಳಿಂದ ಮುಕ್ಯವಾಗಿ ಹೆಸರುಪರಿಚೆಗಳನ್ನು ಪಡೆಯಲಾಗುತ್ತದೆ, ಮತ್ತು ಇದಕ್ಕಾಗಿ ಅವಕ್ಕೆ ಅಲು ಮತ್ತು ಕು ಎಂಬ ಎರಡು ಒಟ್ಟುಗಳಲ್ಲಿ ಒಂದನ್ನು (ಇಲ್ಲವೇ ಅವೆರಡೂ ಒಟ್ಟಿಗಿರುವ ಕಲು ಎಂಬುದನ್ನು) ಸೇರಿಸಲಾಗುತ್ತದೆ (೩.೪.೨ ನೋಡಿ). ಇವುಗಳಲ್ಲಿ ಅಲು ಎಂಬುದನ್ನು ಉಕಾರದಲ್ಲಿ ಕೊನೆಗೊಳ್ಳುವ ಎಸಕಪದಗಳಿಗೆ ಸೇರಿಸಲಾಗುತ್ತದೆ, ಮತ್ತು ಕು ಎಂಬುದನ್ನು ಮುಕ್ಯವಾಗಿ ಇಕಾರ ಇಲ್ಲವೇ ಎಕಾರದಲ್ಲಿ ಕೊನೆಗೊಳ್ಳುವ ಎಸಕಪದಗಳಿಗೆ ಸೇರಿಸಲಾಗುತ್ತದೆ:

| ಉಕಾರದಲ್ಲಿ ಕೊನೆಗೊಳ್ಳುವವು | | ಎಕಾರ/ಇಕಾರದಲ್ಲಿ ಕೊನೆಗೊಳ್ಳುವವು | |
|---|---|---|---|
| ಇಂಗು | ಇಂಗಲು | ಒಡೆ | ಒಡಕು |
| ಮಾಸು | ಮಾಸಲು | ಕೊಳೆ | ಕೊಳಕು |
| ತೊಳಸು | ತೊಳಸಲು | ಹರಿ | ಹರುಕು |
| ಹಳಸು | ಹಳಸಲು | ಮುರಿ | ಮುರುಕು |
| ಸಿಕ್ಕು | ಸಿಕ್ಕಲು | ತರಿ | ತರಕು, ದರಕು |

ಎಕಾರ ಇಲ್ಲವೇ ಇಕಾರದಲ್ಲಿ ಕೊನೆಗೊಳ್ಳುವ ಎಸಕಪದಗಳಿಗೆ ಕು ಎಂಬ ಒಟ್ಟನ್ನು ಸೇರಿಸಿದ ಬಳಿಕ ಅಲು ಎಂಬ ಒಟ್ಟನ್ನೂ ಸೇರಿಸಲು ಬರುತ್ತದೆ:

| | | |
|---|---|---|
| ಒಡೆ | ಒಡಕು | ಒಡಕಲು |
| ಇಳಿ | | ಇಳುಕಲು |
| ಸವೆ | | ಸವಕಲು |
| ತರಿ | ತರಕು | ತರಕಲು |
| ಕೊರೆ | | ಕೊರಕಲು |
| ಕುದಿ | | ಕುದುಕಲು |

(ಚ) ಎಸಕಪದಗಳಿಗೆ ಅ ಒಟ್ಟನ್ನು ಸೇರಿಸಿ ಪರಿಚೆರೂಪಗಳನ್ನು ಪಡೆಯಲು ಬರುತ್ತದೆ (೪.೭.೧ ನೋಡಿ), ಮತ್ತು ಇವನ್ನು ಹೆಸರುಪರಿಚೆಗಳಾಗಿ ಬಳಸಲು ಬರುತ್ತದೆ. ಎಸಕಪದಗಳಿಗೆ ಈ ರೀತಿ ಅ ಒಟ್ಟನ್ನು ಸೇರಿಸುವ ಮೊದಲು ಮುಂಬೊತ್ತಿನ ವ್, ಹಿಂಬೊತ್ತಿನ ಇದ್, ಇಲ್ಲವೇ ಅಲ್ಲಗಳೆತದ ಅದ್ ಒಟ್ಟುಗಳನ್ನು ಸೇರಿಸಲಾಗುತ್ತದೆ. ಹಾಗಾಗಿ, ಒಂದೊಂದು ಎಸಕಪದಕ್ಕೂ ಮೂರು ಮೂರು ಪರಿಚೆರೂಪಗಳು ಸಿಗುತ್ತವೆ:

| ಎಸಕಪದ | ಮುಂಬೊತ್ತು | ಹಿಂಬೊತ್ತು | ಅಲ್ಲಗಳೆತ |
|---|---|---|---|
| ಹಾಡು | ಹಾಡುವ | ಹಾಡಿದ | ಹಾಡದ |
| ತಿನ್ನು | ತಿನ್ನುವ | ತಿಂದ | ತಿನ್ನದ |
| ನಂಬು | ನಂಬುವ | ನಂಬಿದ | ನಂಬದ |
| ಕೊಳೆ | ಕೊಳೆಯುವ | ಕೊಳೆತ | ಕೊಳೆಯದ |

ಇಂತಹ ಎಸಕರೂಪಗಳಲ್ಲಿ ಕೆಟ್ಟ (ಕೆಡು), ತಕ್ಕ (ತಗು), ಮಿಕ್ಕ (ಮಿಗು) ಎಂಬಂತಹ ಕೆಲವು ಪರಿಚೆರೂಪಗಳು ಹೆಚ್ಚುಕಡಿಮೆ ಹೆಸರುಪರಿಚೆಗಳಾಗಿಯೇ ಬಳಕೆಯಲ್ಲಿವೆ; ಉಳಿದವುಗಳಲ್ಲಿಯೂ ಹಲವನ್ನು ಹೆಸರುಪರಿಚೆಗಳ ಹಾಗೆ ಬಳಸಲು ಬರುತ್ತದೆ; ಇದನ್ನು ಕೆಳಗೆ ಕೊಟ್ಟಿರುವ ಸೊಲ್ಲುಗಳಲ್ಲಿ ಕಾಣಬಹುದು:

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೧ಕ)	ಅವನಿಗೆ ತಿನ್ನುವ ಅಣಬೆ ಯಾವುದೆಂದು ಗೊತ್ತಿರಲಿಲ್ಲ.
(೧ಚ)	ಈ ಒಡೆದ ಮಡಕೆಯನ್ನು ಹೊರಗೆ ಹಾಕು.
(೧ಟ)	ಕೊಳೆಯದ ಹಣ್ಣುಗಳನ್ನು ಬೇರೆ ಇರಿಸಿ.

(ಟ) ಕೆಲವು ಎಸಕಪದಗಳನ್ನು ಅವುಗಳಲ್ಲಿ ಯಾವ ಮಾರ್‍ಪಾಡನ್ನೂ ಮಾಡದೆ ಹೆಸರುಪರಿಚೆಗಳಾಗಿ ಬಳಸಲು ಬರುತ್ತದೆ:

(೨ಕ)	ಹುಡುಗ ಕುಂಟುತ್ತಿದ್ದಾನೆ.
(೨ಚ)	ಹುಡುಗನ ಕಾಲು ಕುಂಟು (ಆಗಿದೆ).

(೩ಕ)	ಒಂದು ಕಟ್ಟು ಸಡಿಲಿದೆ.
(೩ಚ)	ಒಂದು ಕಟ್ಟು ಸಡಿಲು (ಆಗಿದೆ).

ಕಂದು, ಕರಿ, ಕೊರೆ, ಸವಿ, ಅಂಟು, ಉರಿ ಎಂಬಂತಹ ಬೇರೆಯೂ ಕೆಲವು ಎಸಕಪದಗಳನ್ನು ಈ ರೀತಿ ಅವಕ್ಕೆ ಯಾವ ಒಟ್ಟನ್ನೂ ಸೇರಿಸದೆ ನೇರವಾಗಿ ಹೆಸರುಪರಿಚೆಗಳ ಜಾಗದಲ್ಲಿ ಬಳಸಲು ಬರುತ್ತದೆ.

ಜೋಡುಪದಗಳಲ್ಲಿ ಮೊದಲನೆಯ ಪದವಾಗಿ ಪರಿಚೆಪದಗಳನ್ನು ಮಾತ್ರವಲ್ಲದೆ ಎಸಕಪದಗಳನ್ನೂ (ಅವುಗಳಲ್ಲಿ ಯಾವ ಮಾರ್‍ಪಾಡನ್ನೂ ಮಾಡದೆ) ಬಳಸಲು ಬರುತ್ತದೆ (೨.೫ ನೋಡಿ), ಮತ್ತು ಇಂತಹ ಎಸಕಪದಗಳಲ್ಲಿ ಕೆಲವು, ಹೆಸರುಪದಗಳು ಗುರುತಿಸುವ ಪಾಂಗುಗಳ ಎಸಕಗಳನ್ನೇ ಪರಿಚೆಯಾಗಿ ತಿಳಿಸುತ್ತವೆ.

ಎತ್ತುಗೆಗಾಗಿ, ತಳ್ಳುಬಂಡಿ, ಹಚ್ಚುಮದ್ದು, ತೂಗುಬೆಳಕು, ನೋಡುಗುಂಡಿ ಎಂಬಂತಹ ಜೋಡುಪದಗಳಲ್ಲಿ ಬಂದಿರುವ ತಳ್ಳು, ಹಚ್ಚು, ತೂಗು, ನೋಡು ಎಂಬ ಎಸಕಪದಗಳು ಬಂಡಿ, ಮದ್ದು, ಬೆಳಕು, ಗುಂಡಿ ಎಂಬ ಹೆಸರುಪದಗಳಿಗೆ ಸಂಬಂದಿಸಿದ ಎಸಕಗಳನ್ನು ತಿಳಿಸುವ ಮೂಲಕ ಅವುಗಳ ಪರಿಚೆಯನ್ನು ತಿಳಿಸುತ್ತವೆ. ಹಾಗಾಗಿ, ಇವು ಜೋಡುಪದಗಳಲ್ಲಿ ಎಸಕಪದಗಳಾಗಿಯೇ ಬಳಕೆಯಾಗಿವೆಯೆಂದು ಹೇಳಲು ಬರುತ್ತದೆ.

ಆದರೆ, ಇನ್ನು ಕೆಲವು ಎಸಕಪದಗಳು ನೇರವಾಗಿ ಹೆಸರುಪದಗಳು ಗುರುತಿಸುವ ಪಾಂಗುಗಳ ಪರಿಚೆಯನ್ನೇ ತಿಳಿಸುತ್ತಿರುವ ಹಾಗೆ ಕಾಣಿಸುತ್ತವೆ. ಎತ್ತುಗೆಗಾಗಿ, ಉರಿಗಾಳಿ, ಸೀಳ್ದುಟಿ, ಕಂದುಮೋರೆ, ಜೋಲುಗಿವಿ ಎಂಬ ಜೋಡುಪದಗಳಲ್ಲಿ ಬಂದಿರುವ ಉರಿ, ಸೀಳು, ಕಂದು, ಜೋಲು ಎಂಬ ಎಸಕಪದಗಳು ನೇರವಾಗಿ ಗಾಳಿ, ತುಟಿ, ಮೋರೆ, ಮತ್ತು ಕಿವಿಗಳ ಪರಿಚೆಯನ್ನು ತಿಳಿಸುತ್ತವಲ್ಲದೆ ಎಸಕವನ್ನು ತಿಳಿಸುವುದಿಲ್ಲ.

ಹಾಗಿದ್ದರೂ, ಇಂತಹ ಎಸಕಪದಗಳು ಮೇಲೆ ಕೊಟ್ಟಿರುವ ಕುಂಟು, ಸಡಿಲು, ಸವಿ ಎಂಬಂತಹ ಎಸಕಪದಗಳಿಂದ ಬೇರಾಗಿವೆ. ಯಾಕೆಂದರೆ, ಅವನ್ನು ಆಗಿರು ಎಂಬುದರೊಂದಿಗೆ ಬಳಸಲು ಬರುವುದಿಲ್ಲ:

(೪ಕ)	ಅವಳ ತುಟಿ ಕೆಂಪು.
(೪ಚ)	ಅವಳ ತುಟಿ ಕೆಂಪಾಗಿದೆ.
(೫ಕ)	ಅವಳ ತುಟಿ ಸೀಳಿದೆ.
(೫ಚ)	*ಅವಳ ತುಟಿ ಸೀಳಾಗಿದೆ.

(ತ) ಎಸಕಪದಗಳಿಗೆ ನಾಲ್ಕು ಬಗೆಯ ಒಟ್ಟುಗಳನ್ನು ಸೇರಿಸಿ, ಅವುಗಳಿಂದ ಜೋಡಿಸುವ ರೂಪಗಳನ್ನು ಪಡೆಯಲು ಬರುತ್ತದೆ ಎಂಬುದನ್ನು (೪.೭.೨)ರಲ್ಲಿ ವಿವರಿಸಲಾಗಿದೆ (ಹಾಡಿ, ಹಾಡುತ್ತಾ, ಹಾಡಲು, ಹಾಡದೆ). ಇಂತಹ ಜೋಡಿಸುವ ರೂಪಗಳಲ್ಲಿ ತಿರುಗಿ, ಮರಳಿ ಎಂಬಂತಹ ಕೆಲವು ರೂಪಗಳು ಹೆಚ್ಚುಕಡಿಮೆ ಎಸಕಪರಿಚೆಗಳ ಹಾಗೆಯೇ ಬಳಕೆಯಾಗುತ್ತವೆ:

(೬ಕ)	ಮನೆಗೆ ಹೋಗುತ್ತೇನೆಂದು ಹೊರಟವನು ಮರಳಿ ಬಂದ.

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

(೬ಚ)  ನಾಯಿ ತಿರುಗಿ ಇಲ್ಲಿಗೇ ಬಂದಿದೆ.

ಉಳಿದ ಜೋಡಿಸುವ ರೂಪಗಳಲ್ಲೂ ಹಲವನ್ನು ಎಸಕಗಳ ಪರಿಚೆಯೊಂದನ್ನು ತಿಳಿಸುವುದಕ್ಕಾಗಿ ಬಳಸಲು ಬರುತ್ತಿದ್ದು, ಅವು ಎಸಕಪರಿಚೆಗಳನ್ನು ಹೋಲುತ್ತವೆ:

(೭ಕ)  ನಸು ತೆರೆದ ಬಾಗಿಲಿನಿಂದ ಒಳಗೆ ನೋಡಿದ.
(೭ಚ)  ಅವನು ಹೆದರುತ್ತಾ ಗವಿಯೊಳಗೆ ಇಳಿದ.
(೭ಟ)  ಅವನು ತುಸುವೂ ಹೆದರದೆ ಇಲ್ಲಿಗೆ ಬಂದಿದ್ದಾನೆ.

(೭ಕ)ದಲ್ಲಿ ತೆರೆ ಎಂಬ ಎಸಕಪದದ ತೆರೆದ ಎಂಬ ಜೋಡಿಸುವ ರೂಪವನ್ನು ಬಳಸಲಾಗಿದ್ದು, ಇದು ಬಾಗಿಲಿನ ಪರಿಚೆಯೊಂದನ್ನು ತಿಳಿಸುತ್ತಿದೆ; ಇದರೊಂದಿಗೆ ಬಂದಿರುವ ನಸು ಎಂಬುದು ಈ ಪರಿಚೆಯ ಹಂತವೊಂದನ್ನು ತಿಳಿಸುತ್ತಿದೆ.

ಇದೇ ರೀತಿಯಲ್ಲಿ (೭ಚ)ದಲ್ಲಿ ಬಂದಿರುವ ಹೆದರುತ್ತಾ ಎಂಬ ಜೋಡಿಸುವ ರೂಪದ ಬಳಕೆ, ಮತ್ತು (೭ಟ)ದಲ್ಲಿ ಹೆದರದೆ ಎಂಬ ಜೋಡಿಸುವ ರೂಪದ ಬಳಕೆ ಎಸಕಪರಿಚೆಯ ಬಳಕೆಯ ಹಾಗೆಯೇ ಇದೆ. ಈ ಮೂರು ಜೋಡಿಸುವ ರೂಪಗಳೂ ಎಸಕಗಳು ಹೇಗೆ ನಡೆದುವು ಎಂಬುದಾಗಿ ಎಸಕಪರಿಚೆಗಳು ಕೊಡುವಂತಹ ಹುರುಳನ್ನೇ ಕೊಡುತ್ತಿವೆ.

### ೧೧.೨.೪ ಹೆಸರುಪದಗಳಿಂದ ಪಡೆದ ಪರಿಚೆಪದಗಳು

ಹೆಸರುಪದಗಳಿಂದ ಹೆಸರುಪರಿಚೆಗಳನ್ನು ಪಡೆಯಲು ಅವಕ್ಕೆ ಪತ್ತುಗೆಯ *ಅ* ಒಟ್ಟನ್ನು ಸೇರಿಸುವುದೇ ಹೆಚ್ಚಿನೆಡೆಗಳಲ್ಲೂ ಬಳಕೆಯಾಗುವ ಹೊಲಬು. ಎಲ್ಲಾ ಬಗೆಯ ಹೆಸರುಪದಗಳನ್ನೂ ಈ ರೀತಿ ಅವಕ್ಕೆ *ಅ* ಒಟ್ಟನ್ನು ಸೇರಿಸಿ ಹೆಸರುಪರಿಚೆಗಳ ಜಾಗದಲ್ಲಿ ಬಳಸಲು ಬರುತ್ತದೆ:

| | |
|---|---|
| ಮರದ ಮನೆ | ಮಣ್ಣಿನ ಗೋಡೆ |
| ಕಲ್ಲಿನ ಕೋಟೆ | ಬೇಸರದ ಕೆಲಸ |
| ನೆಮ್ಮದಿಯ ಬಾಳು | ತೂಕದ ಗಂಟು |
| ಗುಟ್ಟಿನ ಸಂಗತಿ | ಸಡಗರದ ಕೂಟ |

(ಕ) ಆದರೆ, (೬.೩.೫)ರಲ್ಲಿ ತಿಳಿಸಿದ ಹಾಗೆ, ಪದಕಂತೆಗಳ ಹರವನ್ನು ಹೆಸರುಪರಿಚೆಗಳು ಕುಗ್ಗಿಸುವುದಕ್ಕೂ ಹೆಸರುಪದಗಳ ಪತ್ತುಗೆರೂಪಗಳು ಕುಗ್ಗಿಸುವುದಕ್ಕೂ ನಡುವೆ ಒಂದು ಮುಕ್ಯವಾದ ಬೇರ್ಮೆಯಿದೆ. ಹೆಸರುಪರಿಚೆಗಳು ನೇರವಾಗಿ ಹೆಸರುಕಂತೆಯ ಹುರುಳಿಗೆ ಒಂದು ಪರಿಚೆಯ ಹುರುಳನ್ನು ಸೇರಿಸುವ ಮೂಲಕ ಅದರ ಹರವನ್ನು ಕುಗ್ಗಿಸುತ್ತವೆ.

ಎತ್ತುಗೆಗಾಗಿ, ಹೊಸ ಬಟ್ಟೆ ಎಂಬ ಪದಕಂತೆಯಲ್ಲಿ ಬಂದಿರುವ ಹೊಸ ಎಂಬ ಹೆಸರುಪರಿಚೆ ಬಟ್ಟೆ ಎಂಬ ಹೆಸರುಪದ ಕೊಡುವ ಹುರುಳಿಗೆ ಒಂದು ಪರಿಚೆಯನ್ನು (ಬಟ್ಟೆ ಹೊಸದು ಎಂಬುದಾಗಿ) ಸೇರಿಸುವ ಮೂಲಕ ಆ ಪದಕಂತೆಯ ಹರವನ್ನು ಕಡಿಮೆಮಾಡುತ್ತದೆ. ಬಟ್ಟೆ ಎಂಬ ಪದ ಗುರುತಿಸಬಲ್ಲ ಪಾಂಗುಗಳಲ್ಲಿ ಕೆಲವನ್ನಶ್ಟೇ ಹೊಸ ಬಟ್ಟೆ ಎಂಬ ಪದಕಂತೆ ಗುರುತಿಸಬಲ್ಲುದು (ಎತ್ತುಗೆಗಾಗಿ, ಹಳೆ ಬಟ್ಟೆಯನ್ನು ಬಟ್ಟೆ ಎಂಬುದು ಗುರುತಿಸಬಲ್ಲುದು; ಆದರೆ ಹೊಸ ಬಟ್ಟೆ ಎಂಬುದು ಗುರುತಿಸಲಾರದು).

ಇದಕ್ಕೆ ಬದಲು, ಹೆಸರುಪದಗಳ ಪತ್ತುಗೆ ರೂಪಗಳು ಮೊದಲಿಗೆ ಒಂದು ಪಾಂಗನ್ನು ಗುರುತಿಸುತ್ತವೆ, ಮತ್ತು ಆ ಪಾಂಗಿಗೂ ಅವುಗಳ ಬಳಿಕ ಬಂದ ಹೆಸರುಪದ ಗುರುತಿಸುವ ಪಾಂಗಿಗೂ ನಡುವೆ ನಂಟಿದೆ ಎಂಬುದನ್ನು ತಿಳಿಸುವ ಮೂಲಕ ಹೆಸರುಪದ ಗುರುತಿಸುವ ಪಾಂಗಿನ ಹರವನ್ನು ಕಡಿಮೆಮಾಡುತ್ತವೆ.

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

ಎತ್ತುಗೆಗಾಗಿ, ಕಲ್ಲಿನ ಗೋಡೆ ಎಂಬ ಪದಕಂತೆಯಲ್ಲಿ ಕಲ್ಲು ಎಂಬುದು ಒಂದು ಪಾಂಗನ್ನು ಗುರುತಿಸುತ್ತದೆ, ಮತ್ತು ಗೋಡೆ ಎಂಬುದು ಇನ್ನೊಂದು ಪಾಂಗನ್ನು ಗುರುತಿಸುತ್ತದೆ; ಈ ಎರಡು ಪಾಂಗುಗಳ ನಡುವೆ ನಂಟಿದೆ ಎಂಬುದನ್ನು ಕಲ್ಲು ಎಂಬುದರ ಬಳಿಕ ಬಂದ ಪತ್ತುಗೆ ಒಟ್ಟು ತಿಳಿಸುತ್ತದೆ. ಇದರಿಂದಾಗಿ, ಗೋಡೆ ಎಂಬುದಕ್ಕಿಂತ ಕಲ್ಲಿನ ಗೋಡೆ ಎಂಬುದರ ಹರವು ಕಡಿಮೆಯಾಗಿರುತ್ತದೆ.

(ಚ) ಬೆಡಗು, ಮುದ್ದು, ಸಯ್ಯು, ಕಳಕಳಿ ಮೊದಲಾದ ಕೆಲವು ಹೆಸರುಪದಗಳು ಒಂದೊಂದು ಪರಿಚೆಯನ್ನಶ್ಟೇ ಗುರುತಿಸುತ್ತಿದ್ದು, ಅವುಗಳ ಪತ್ತುಗೆರೂಪವನ್ನು ಹೆಸರುಪದಗಳೊಂದಿಗೆ ಬಳಸಿದಾಗ ಅವು ನೇರವಾಗಿ ಹೆಸರುಕಂತೆಗಳಿಗೆ ಅವು ತಿಳಿಸುವ ಪರಿಚೆಯನ್ನು ಸೇರಿಸುವ ಹಾಗೆ ಕಾಣಿಸುತ್ತದೆ. ಹಾಗಾಗಿ, ಅವು ಹೆಸರುಪರಿಚೆಗಳೊಂದಿಗೆ ಹೆಚ್ಚಿನ ಹೋಲಿಕೆಯನ್ನು ತೋರಿಸುತ್ತವೆ.

ಎತ್ತುಗೆಗಾಗಿ, ಬೆಡಗಿನ ಹುಡುಗಿ ಎಂಬ ಪದಕಂತೆಯಲ್ಲಿ ಬಂದಿರುವ ಬೆಡಗು ಪದ ಒಂದು ಪರಿಚೆಯನ್ನಶ್ಟೇ ತಿಳಿಸುತ್ತದೆ; ಹಾಗಾಗಿ, ಅದು ನೇರವಾಗಿ ಹೆಸರುಕಂತೆಯ ಹುರುಳಿಗೆ ಪರಿಚೆಯ ಹುರುಳನ್ನು ಸೇರಿಸುವ ದೊಡ್ಡ, ಹೆಡ್ಡು, ಬಡ ಎಂಬಂತಹ ಹೆಸರುಪರಿಚೆಗಳನ್ನು ಹೆಚ್ಚು ಹೋಲುತ್ತದೆ.

(ಟ) ಕಣ್ಣು, ಕಿವಿ, ಕಯ್, ಬಾಯಿ ಎಂಬಂತಹ ಹೆಸರುಪದಗಳಿಗೆ ಆರೆ ಒಟ್ಟನ್ನು ಸೇರಿಸಿ ಅವುಗಳಿಂದ ಕಣ್ಣಾರೆ, ಕಿವಿಯಾರೆ ಎಂಬಂತಹ ಎಸಕಪರಿಚೆಗಳನ್ನು ಪಡೆಯಲು ಬರುತ್ತದೆ (೨.೪.೪ ನೋಡಿ).

(ತ) ಕೆಲವು ಹೆಸರುಪದಗಳನ್ನು ನೇರವಾಗಿ ಹೆಸರುಪರಿಚೆಗಳ ಜಾಗದಲ್ಲಿ ಬಳಸಲು ಬರುತ್ತದೆ. ಎತ್ತುಗೆಗಾಗಿ, ಕೆಳಗೆ ಕೊಟ್ಟಿರುವ ಬಳಕೆಗಳನ್ನು ಗಮನಿಸಬಹುದು:

| | | | |
|---|---|---|---|
| ಆನೆ | ಆನೆ ಸೊಳ್ಳೆ | ಕಳ್ಳ | ಕಳ್ಳ ದಾರಿ |
| ಕಾಡು | ಕಾಡು ಕೋಣ | ಕಾಲು | ಕಾಲು ರುಪಾಯಿ |
| ಕಾವಿ | ಕಾವಿ ಬಣ್ಣ | ಅಜ್ಜ | ಅಜ್ಜಗಳ್ಳ |
| ಗುಂಡು | ಗುಂಡು ಕಲ್ಲು | ದಿಂಡು | ದಿಂಡು ಮಯ್ |
| ಹೊನ್ನು | ಹೊನ್ನು ಬಣ್ಣ | ಕೂಸು | ಕೂಸಾಟ |
| ಕೋಲು | ಕೋಲು ಬಲೆ | | |

ಮೇಲೆ ಕೊಟ್ಟಿರುವ ಬಳಕೆಗಳಲ್ಲಿ ಹೆಸರುಪದಗಳು ಅವುಗಳ ಒಂದು ಹುರುಳನ್ನಶ್ಟೇ ಬಳಕೆಗೆ ತರುತ್ತವೆ. ಎತ್ತುಗೆಗಾಗಿ, ಆನೆಸೊಳ್ಳೆ ಎಂಬಲ್ಲಿ ಆನೆ ಪದಕ್ಕಿರುವ ದೊಡ್ಡ ಎಂಬ ಹುರುಳಶ್ಟೇ ಬಳಕೆಯಾಗಿದೆ, ಮತ್ತು ಕಳ್ಳದಾರಿ ಎಂಬಲ್ಲಿ ಕಳ್ಳ ಪದದ ತಿಳಿಯದ ಎಂಬ ಹುರುಳು ಬಳಕೆಗೆ ಬಂದಿದೆ. ಹಾಗಾಗಿ, ಇಲ್ಲಿ ಒಂದೇ ರೂಪದ ಎರಡು ಬೇರೆ ಬೇರೆ ಪದಗಳು ಬಳಕೆಯಾಗಿವೆಯೆಂದೂ ಹೇಳಲು ಬರುತ್ತದೆ.

### ೧೧.೨.೫ ಹೆಸರುಪರಿಚೆಗಳಿಂದ ಪಡೆದ ಎಸಕಪರಿಚೆಗಳು

ಹೆಸರುಪರಿಚೆಗಳಿಗೆ ಮುಕ್ಯವಾಗಿ ಅಗೆ ಇಲ್ಲವೇ ಅನೆ ಎಂಬ ಒಟ್ಟನ್ನು ಸೇರಿಸಿ ಎಸಕಪರಿಚೆಗಳನ್ನು ಪಡೆಯಲು ಬರುತ್ತದೆ. ಕೆಲವು ಅಣಕಬೇರುಗಳಿಗೂ ಈ ಒಟ್ಟನ್ನು ಸೇರಿಸಿ ಎಸಕಪರಿಚೆಗಳನ್ನು ಪಡೆಯಲು ಬರುತ್ತದೆ ಎಂಬುದನ್ನು ಮೇಲೆಯೇ ತಿಳಿಸಲಾಗಿದೆ. ಇದಲ್ಲದೆ, ಅಗೆ ಇಲ್ಲವೇ ಅನೆ ಒಟ್ಟಿನಲ್ಲಿ ಕೊನೆಗೊಳ್ಳುವ ಬೇರೆಯೂ ಕೆಲವು ಎಸಕಪರಿಚೆಗಳಿದ್ದು, ಇವು ಹೇಗೆ ಉಂಟಾಗಿವೆಯೆಂದು ಕಚಿತವಾಗಿ ಹೇಳಲು ಬರುವುದಿಲ್ಲ:

(೧) <u>ಪರಿಚೆಬೇರಿನಿಂದ ಪಡೆದ ಎಸಕಪರಿಚೆಗಳು</u>:

| | | | |
|---|---|---|---|
| ಬೆಳ್ | ಬೆಳ್ಳಗೆ/ನೆ | ಕಾರ್ | ಕರ್‍ರಗೆ |
| ಕಮ್ | ಕಮ್ಮಗೆ/ನೆ | ತಣ್ | ತಣ್ಣಗೆ/ನೆ |

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

| | | | |
|---|---|---|---|
| ಮೆಲ್ | ಮೆಲ್ಲಗೆ/ನೆ | ನುಣ್ | ನುಣ್ಣಗೆ/ನೆ |

(೨) <u>ಹೆಸರುಪರಿಚೆಗಳಿಂದ ಪಡೆದ ಎಸಕಪರಿಚೆಗಳು</u>:

| | | | |
|---|---|---|---|
| ಕೆಂಪು | ಕೆಂಪಗೆ/ನೆ | ಗುಂಡು | ಗುಂಡಗೆ/ನೆ |
| ದುಂಡು | ದುಂಡಗೆ/ನೆ | ಬಿಸಿ | ಬೆಚ್ಚಗೆ/ನೆ |
| ನಿಡು | ನೆಟ್ಟಗೆ/ನೆ | ಪಚ್ಚೆ | ಪಚ್ಚಗೆ/ನೆ |
| ಕಿಸು | ಕೆಚ್ಚನೆ | ದಟ್ಟ | ದಟ್ಟಗೆ/ನೆ |
| ತೆಳು | ತೆಳ್ಳಗೆ/ನೆ | ನೊಚ್ಚಿತು | ನೊಚ್ಚಗೆ |

(೩) <u>ಬೇರೆ ಕೆಲವು ಎಸಕಪರಿಚೆಗಳು</u>:

ತೆಪ್ಪಗೆ/ನೆ ಕೆಮ್ಮಗೆ/ನೆ ಸುಮ್ಮಗೆ/ನೆ
ಬಿಮ್ಮಗೆ/ನೆ

*ಅಗೆ* ಎಂಬ ಒಟ್ಟಿನಲ್ಲಿ ಕೊನೆಗೊಳ್ಳುವ ಇಂತಹ ಹೆಚ್ಚಿನ ಎಸಕಪರಿಚೆಗಳಲ್ಲೂ ಆ ಒಟ್ಟಿನ ಬದಲು *ಅನೆ* ಒಟ್ಟನ್ನು ಬಳಸಲು ಬರುತ್ತದೆ ಎಂಬುದನ್ನು ಮೇಲಿನ ಎತ್ತುಗೆಗಳಲ್ಲಿ ಕಾಣಬಹುದು. (೩)ನೇ ಗುಂಪಿನಲ್ಲಿ ಬರುವ ಎಸಕಪರಿಚೆಗಳ ಉಂಟುಮಾಡುವಿಕೆಯಲ್ಲಿ ಮಾತ್ರ, ಎಂತಹ ಬೇರು ಇಲ್ಲವೆ ಪದ ಬಳಕೆಯಾಗಿದೆ ಯೆಂದು ಹೇಳಲು ಬರುವುದಿಲ್ಲ.

ಈ (೩)ನೇ ಗುಂಪಿನಲ್ಲಿ ಬರುವ ಎಸಕಪರಿಚೆಗಳಲ್ಲಿ *ಅಗೆ* ಮತ್ತು *ಅನೆ* ಎಂಬ ಎರಡು ಒಟ್ಟುಗಳೂ ಬರಬಲ್ಲುವಾದುದರಿಂದ, ಅವನ್ನು ಅಣಕಬೇರು ಇಲ್ಲವೇ ಅಣಕಪದಗಳಿಂದ ಪಡೆಯಲು ಬರುವುದಿಲ್ಲ. ಯಾಕೆಂದರೆ, ಅಣಕಬೇರು ಇಲ್ಲವೇ ಅಣಕಪದಗಳನ್ನು ಬಳಸಿ ಪಡೆದ ಎಸಕಪರಿಚೆಗಳಲ್ಲಿ *ಅಗೆ* ಒಟ್ಟು ಬರುವುದಿಲ್ಲ (೧೧.೨.೧ ನೋಡಿ).

### ೧೧.೨.೬ ಎಸಕಪರಿಚೆಗಳಿಂದ ಪಡೆದ ಹೆಸರುಪರಿಚೆಗಳು

ಎಸಕಪರಿಚೆಗಳಿಂದ ಹೆಸರುಪರಿಚೆಗಳನ್ನು ಪಡೆಯಲು ಮುಕ್ಯವಾಗಿ ಅವಕ್ಕೆ ಪತ್ತುಗೆಯ *ಅ* ಒಟ್ಟನ್ನು ಸೇರಿಸಲಾಗುತ್ತದೆ. *ಅಗೆ* ಒಟ್ಟಿನಲ್ಲಿ ಕೊನೆಗೊಳ್ಳುವ ಎಲ್ಲಾ ಎಸಕಪರಿಚೆಗಳನ್ನೂ ಈ ರೀತಿ ಅವಕ್ಕೆ *ಅ* ಒಟ್ಟನ್ನು ಸೇರಿಸಿ ಹೆಸರುಪರಿಚೆಗಳಾಗಿ ಬಳಸಲು ಬರುತ್ತದೆ:

| <u>ಎಸಕಪರಿಚೆಗಳು</u> | <u>ಹೆಸರುಪರಿಚೆಗಳು</u> |
|---|---|
| ಮೆಲ್ಲಗೆ ಮಾತನಾಡಿದ | ಮೆಲ್ಲಗಿನ ಮಾತು |
| ದೋಸೆಯನ್ನು ತೆಳ್ಳಗೆ ಎರೆದಳು | ತೆಳ್ಳಗಿನ ದೋಸೆ |
| ಕಂಬಳಿ ಬೆಚ್ಚಗಿದೆ | ಬೆಚ್ಚಗಿನ ಕಂಬಳಿ |
| ಕತ್ತಿಯನ್ನು ಕೆಂಪಗೆ ಕಾಯಿಸಿದ | ಕೆಂಪಗಿನ ಕತ್ತಿ |
| ಹಿಟ್ಟನ್ನು ನುಣ್ಣಗೆ ಅರೆದ | ನುಣ್ಣಗಿನ ಹಿಟ್ಟು |

ಆದರೆ, *ಅನೆ* ಒಟ್ಟಿನಲ್ಲಿ ಕೊನೆಗೊಳ್ಳುವ ಎಸಕಪರಿಚೆಗಳನ್ನು ಸಾಮಾನ್ಯವಾಗಿ ಈ ರೀತಿ ಪತ್ತುಗೆಯ *ಅ* ಒಟ್ಟಿನೊಂದಿಗೆ ಹೆಸರುಪರಿಚೆಗಳಾಗಿ ಬಳಸಲು ಬರುವುದಿಲ್ಲ (ಈ ಕಟ್ಟಲೆಗೆ ನುಣ್ಣನೆಯ ಅರಿವೆ, ಪಚ್ಚನೆಯ ಬಣ್ಣ ಎಂಬಂತಹ ಕೆಲವೇ ಕೆಲವು ಹೊರಪಡಿಕೆಗಳಶ್ಟೇ ಇವೆ).

ಬೇರೆಯೂ ಹಲವು ಎಸಕಪರಿಚೆಗಳನ್ನು ಈ ರೀತಿ ಪತ್ತುಗೆಯ *ಅ* ಒಟ್ಟಿನೊಂದಿಗೆ ಸೇರಿಸಿ ಹೆಸರುಪರಿಚೆಗಳಾಗಿ ಬಳಸಲು ಬರುತ್ತದೆ:

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

| | |
|---|---|
| ಕಂಡಿತ ಬರುತ್ತಾನೆ | ಕಂಡಿತದ ಬರವು |
| ಇವತ್ತು ಹೇಳುತ್ತಾನೆ | ಇವತ್ತಿನ ಹೇಳಿಕೆ |
| ಮೇಲೆ ನೋಡಿದ | ಮೇಲಿನ ನೋಟ |
| ಚೆಚ್ಚರ ಕೆಲಸ ಮಾಡಿದ | ಚೆಚ್ಚರದ ಕೆಲಸ |
| ಹೆಚ್ಚು ಕೊಟ್ಟ | ಹೆಚ್ಚಿನ ಕೊಡುಗೆ |

ಅಳ್ಳಕ, ಗಟ್ಟಿ, ಹಾಳು, ನೇರ, ಓರೆ ಎಂಬಂತಹ ಕೆಲವು ಪರಿಚೆಪದಗಳನ್ನು ಅವುಗಳಲ್ಲಿ ಯಾವ ಮಾರ್ಪಾಡನ್ನೂ ಮಾಡದೆ ಎಸಕಪರಿಚೆಗಳಾಗಿ, ಇಲ್ಲವೇ ಹೆಸರುಪರಿಚೆಗಳಾಗಿ ಬಳಸಲು ಬರುತ್ತದೆ; ಇಂತಹ ಪದಗಳೊಂದಿಗೆ ಅ ಒಟ್ಟನ್ನು ಸೇರಿಸಬೇಕಾಗುವುದಿಲ್ಲ:

| | |
|---|---|
| ಜಡೆಯನ್ನು ಅಳ್ಳಕ ಹೆಣೆದಳು | ಅಳ್ಳಕ ಜಡೆ |
| ಹಿಟ್ಟನ್ನು ಗಟ್ಟಿ ಅರೆದಳು | ಗಟ್ಟಿ ಹಿಟ್ಟು |
| ಕಂಬವನ್ನು ಓರೆ ನೆಟ್ಟ | ಓರೆ ಕಂಬ |
| ಹುಡುಗ ನೇರ ಓಡಿದ | ನೇರ ಓಟ |

### ೧೧.೨.೭ ತಿರುಳು

ಪರಿಚೆಪದಗಳನ್ನು ಪರಿಚೆಬೇರುಗಳಿಂದ, ಅಣಕಬೇರುಗಳಿಂದ, ಮತ್ತು ಎಸಕಪದ ಮತ್ತು ಹೆಸರುಪದಗಳಿಂದ ಪಡೆಯುವುದು ಹೇಗೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಇದಲ್ಲದೆ, ಹೆಸರುಪರಿಚೆಗಳಿಂದ ಎಸಕಪರಿಚೆಗಳನ್ನು ಮತ್ತು ಎಸಕಪರಿಚೆಗಳಿಂದ ಹೆಸರುಪರಿಚೆಗಳನ್ನು ಪಡೆಯುವುದು ಹೇಗೆ ಎಂಬುದನ್ನೂ ಇಲ್ಲಿ ತಿಳಿಸಲಾಗಿದೆ.

# ೧೧.೩ ಹೆಸರುಪರಿಚೆಗಳ ಬೇರ್ಪಡಿಕೆ

ಹೆಸರುಪರಿಚೆಗಳ ಬೇರ್ಪಡಿಕೆಯ ಕುರಿತಾಗಿ ಎರಡು ಅರಿದಾದ ಕೇಳ್ವಿಗಳು ನಮ್ಮೆದುರಿವೆ: ಅವನ್ನು ಹೆಸರುಪದಗಳಿಗಿಂತ ಬೇರಾಗಿರುವ ಪದಗುಂಪಿನಲ್ಲಿ ಇರಿಸಬೇಕೇ, ಇಲ್ಲವೇ ಅವೆರಡನ್ನೂ ಒಂದೇ ಪದಗುಂಪಿನ ಎರಡು ಒಳಗುಂಪುಗಳೆಂದು ತಿಳಿಯಬೇಕೇ ಎಂಬುದು ಒಂದು ಕೇಳ್ವಿ, ಮತ್ತು ಅವನ್ನು ಎಸಕಪರಿಚೆಗಳಿಂದ ಬೇರಾಗಿರುವ ಪದಗುಂಪಿನಲ್ಲಿ ಇರಿಸಬೇಕೇ, ಇಲ್ಲವೇ ಅವೆರಡನ್ನೂ ಪರಿಚೆಪದವೆಂಬ ಒಂದೇ ಪದಗುಂಪಿನ ಎರಡು ಒಳಗುಂಪುಗಳೆಂದು ತಿಳಿಯಬೇಕೇ ಎಂಬುದು ಇನ್ನೊಂದು ಕೇಳ್ವಿ.

ಈ ಎರಡು ಕೇಳ್ವಿಗಳಲ್ಲಿ ಮೊದಲನೆಯದನ್ನು ಕೆಳಗೆ (೧೧.೩.೧–೩)ರಲ್ಲಿ ವಿವರಿಸಲಾಗಿದೆ, ಮತ್ತು ಎರಡನೆಯದನ್ನು ಮುಂದೆ (೧೧.೪)ರಲ್ಲಿ ವಿವರಿಸ ಲಾಗುತ್ತದೆ. ಎಸಕಪದಗಳೂ ಅವುಗಳ ಕೆಲವು ಬಳಕೆಗಳಲ್ಲಿ ಹೆಸರುಪರಿಚೆಗಳನ್ನು ಹೋಲುತ್ತವೆ; ಹಾಗಾಗಿ ಅವಕ್ಕೂ ಹೆಸರುಪರಿಚೆಗಳಿಗೂ ನಡುವೆ ಎಂತಹ ಹೋಲಿಕೆ ಮತ್ತು ಬೇರ್ಮೆಗಳಿವೆಯೆಂಬುದನ್ನೂ ತಿಳಿದುಕೊಳ್ಳಬೇಕಾಗುತ್ತದೆ; ಇದನ್ನು ಕೆಳಗೆ (೧೧.೩.೪–೫)ರಲ್ಲಿ ತಿಳಿಸಲಾಗಿದೆ. ಇದಲ್ಲದೆ, ತೋರುಪದಗಳಲ್ಲಿಯೂ ಹೆಸರುಪರಿಚೆಗಳನ್ನು ಹೋಲುವ ಕೆಲವು ಪದಗಳಿವೆ; ಇವನ್ನು ಹೆಸರುಪರಿಚೆಗಳಿಂದ ಬೇರ್ಪಡಿಸುವುದು ಹೇಗೆ ಎಂಬುದನ್ನು (೧೧.೪.೮)ರಲ್ಲಿ ತಿಳಿಸಲಾಗಿದೆ.

### ೧೧.೩.೧ ಹೆಸರುಪದಗಳಿಂದ ಬೇರ್ಪಡಿಸುವುದು

© ಡಾ. ಡಿ. ಎನ್ ಶಂಕರ ಬಟ್. ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.